


ಸಂಪುಟ ೧] ಕೊರವಂಜಿ, ಡಿಸೆಂಬರ್ ೧೯೪೩ [ಸಂಚಿಕೆ ೯

ಕುಹಕಿಡಿಗಳು

ಹೆಬ್ಬಿ ಗುಬ್ಬಾಲೆಯಲ್ಲಿ ಸಕ್ಕರೆ ಕ್ಷಾಮವಂತೆ.

—ಅಂದಿನಿಂದ ಅಲ್ಲಿ ಮಧುಮೇಹ ಖಾಯಿಲೆಯು ಹೆಚ್ಚಾಗಿ ಹಬ್ಬಿರುವುದಂತೆ.

* * *

ಈ ಸಾರಿ ದೀಪಾವಳಿಯನ್ನು ಎ. ಆರ್. ಪಿ. ಸಂಸ್ಥೆಯವರು ಸಾಂಗವಾಗಿ ಆಚರಿಸಿದರಂತೆ.

—ಹಲವಾರು ಬೆಂಕಿಗಳಿಗೆ ನೀರಿಟ್ಟರಂತೆ.

* * *

ಕಲಿಯುಗ ಪ್ರಳಯವು ಸಮೀಪಿಸುತ್ತಿದೆಯಂತೆ.

—ಈಗಿನ ಸ್ಥಿತಿಗತಿಗಳನ್ನು ನೋಡಿದರೆ ಕಲ್ಕಿಯು ಕಬ್ಬಿಣದ ಕುದುರೆಯೇರಿ ಬರುವನೋ ಎನ್ನಿಸುತ್ತದೆ.

* * *

'ಜೀವನ ನಾಟಕ'ದ ಜನಾದರಣೆಯನ್ನು ನೋಡಿದರೆ ನಾಟಕಕರ್ತೃಗಳ ಜೀವನವು ನಾಟಕದಂತೆಯೇ ಸುಖದಾಯಕವಾಗಿರುವುದರಲ್ಲಿ ಸಂದೇಹವಿಲ್ಲ.

ಅಖಿಲ ಭಾರತದ ಹಿತಕ್ಕಾಗಿ ಶ್ರೀ ರಾಜಾಜಿಯವರು ದಿಳ್ಳಿ ದ್ವೀಪಾಂತರಕ್ಕೂ ಹೊರಡಲು ಸಿದ್ಧರಾಗಿದ್ದಾರೆ.

* * *

ಜಪಾನೀಯರು ಪಿಂಗಾಣಿ ಫಿರಂಗಿಗಳನ್ನು ಉಪಯೋಗಿಸುತ್ತಾರೆ ಎಂಬುವುದಕ್ಕೆ ನಿರ್ಧಾರ ದೊರೆತಿಲ್ಲ.

—ಆದರೆ ಮರದ ಮನುಷ್ಯರನ್ನು ಉಪಯೋಗಿಸುತ್ತಾರೆ ಎನ್ನುವುದು ತಿಳಿದು ಬಂದಿದೆ.

* * *

ತ್ರಿರಾಷ್ಟ್ರಗಳ ಮೈತ್ರಿಯು ಆಫ್ರಿಕಾದ ಆಲ್ಜೀರಿಯಸ್ಸಿನಲ್ಲಿ ಸಂಪೂರ್ಣವಾಗಿದೆಯಂತೆ.

* * *

ನಮ್ಮೂರಿನ ಹೋಟಲ ಮಾಣಿಯ ಗೀತಾ ವಾಕ್ಯ. ಕರ್ಮಣ್ಯೇವಾಧಿಕಾರಸ್ತೆ.

—ಮಾಫಲೇಷು ಕದಾಚನ.

* * *

ಸ್ತ್ರೀ ಬಾತ್ಮೀದಾರರೊಬ್ಬರ ಪ್ರಶ್ನೆ "ಹೇಳಿದಂತೆ ಕೇಳುವ ಗಂಡನನ್ನು ಹೆಂಗಸರು ಬಯಸುವರೊ—ಅಥವಾ ಬೇರೆಯ ತರಹ ಗಂಡನನ್ನೋ?

—ಬೇರೆಯ ತರಹ ಗಂಡನುಂಟೇ?

* * *

ಬರ ಬರುತ್ತಾ ಈ ಮೋಟಾರುಗಳು ನೆಲದ ಮಟ್ಟಕ್ಕೇ ಇಳಿಯುತ್ತಿವೆಯಲ್ಲಾ ಎಂದು ಬಾತ್ಮೀದಾರರೊಬ್ಬರ ಆಕ್ಷೇಪಣೆ.

—ಕ್ಷಾಮದಿಂದ ಪಾದಿಗರೆಲ್ಲಾ ತೆಳ್ಳಗಾಗುತ್ತಿದ್ದಾರೆಂಬುದಕ್ಕೆ ಇದು ಸೂಚನೆಯಲ್ಲವೇ—

* * *

ದೊಡ್ಡ ಅಧಿಕಾರಿಗಳ ಹತ್ತಿರ ಹೋದಾಗ, ಮೆಲ್ಲನೆ ಶೀಟಿ ಹಾಕಿದರೆ ಧೈರ್ಯ ಬರುತ್ತದೆಯೆಂದು ವೈದ್ಯರ ಅಭಿಪ್ರಾಯ.

—ಅಲ್ಲಿಗೆ ಹೋಗುವಾಗ ಶೀಟಿ ಹಾಕುವುದಕ್ಕೆ ಧೈರ್ಯ ಎಲ್ಲಿಂದ ತರಬೇಕು?

* * *

ನೂರು ವರ್ಷದ ಪುರುಷನೊಬ್ಬನು ಐವತ್ತು ವರ್ಷದ ಹಿಂದೆ ಹೆಂಗಸರು ಬಹಳ ಲಕ್ಷಣವಂತರಾಗಿದ್ದರು ಎಂದನಂತೆ.

—ಆದರೆ ಈಗ ಅವರಿಗೆಲ್ಲಾ ಐವತ್ತು ವರ್ಷ ವಯಸ್ಸು ಹೆಚ್ಚಿದೆಯಲ್ಲಾ-

"ಈಗಿನ ಕಾಲದ ಯುವಕ ಯುವತಿಯರು ಹಿಂದುಳಿದು ಕೂರಲು ಒಪ್ಪುತ್ತಾರೆ" ಎಂದು ಉದ್ಗಾರ.

—ಚಲನಚಿತ್ರ ಮಂದಿರಗಳಲ್ಲಿ ಇದು ಸಾಮಾನ್ಯವಾಗಿ ಹೋಗಿದೆ.

* * *

ಬೆಂಗಳೂರಿನಲ್ಲಿ ನೀರಿನ ತೊಟ್ಟಿಗೆ ಬೆಂಕಿ ಅಪಘಾತ ಉಂಟಾಯಿತಂತೆ.

—ಬಂಗಾಳ ಪ್ರಾಂತ್ಯವು ಇನ್ನೂ ಚೂಟಿ. ಮಂಜಿನ ಗಡ್ಡೆ ಕಾರ್ಖಾನೆಯು ಬೆಂಕಿ ಬಿದ್ದು ಉರಿಯುತ್ತಿದೆಯಂತೆ.

* * *

ದೈನಂದಿನ ಪತ್ರಿಕೆಗಳ ವರ್ಗಾವರ್ಗಿ ಪಟ್ಟಿಯನ್ನು ನೋಡಿದ್ದೀರೇನು ?

—ಶಿವಮೊಗ್ಗೆ ಜೈಲಿನಿಂದ ಬೆಂಗಳೂರು ಜೈಲಿಗೆ-ಬೆಂಗಳೂರು ಜೈಲಿಂದ ಶ್ರೀರಂಗಪಟ್ಟಣದ ಜೈಲಿಗೆ-ಇತ್ಯಾದಿ.

* * *

ಅಶ್ವಿನಿ ನಕ್ಷತ್ರದಲ್ಲಿ ಹುಟ್ಟಿದವನೊಬ್ಬನಿಗೆ ಕ್ರಾಸ್‌ವರ್ಡ್‌ನಲ್ಲಿ ಪ್ರಥಮ ಬಹುಮಾನ ಬಂದಿದೆಯಂತೆ—

—ಹೆಬ್ಬಿ ಗುಬ್ಬಾಲೆಯಲ್ಲಿನವರೆಲ್ಲಾ ಹೊಸ ಹೊಸ ಜಾತಕಗಳನ್ನು ಬರೆಸುತ್ತಿರುವರಂತೆ.

* * *

ಸುಪ್ರಸಿದ್ಧ ಬೊಂಬಿನ ವ್ಯಾಪಾರಿಯೊಬ್ಬನು ಅತಿವೇಗವಾಗಿ ಮೋಟಾರನ್ನು ನಡೆಸುತ್ತಿರವನಂತೆ ಬೀದಿ ಬೀದಿಗಳಲ್ಲೂ.

—ಆದರೆ ಆತನ ವ್ಯಾಪಾರವನ್ನು ಹೆಚ್ಚು ಮಾಡಲೋಸುಗ ಈ ರೀತಿ ಮಾಡುತ್ತಾನೆಂಬುದು ಸುಳ್ಳು.

* * *

ದಿನ ದಿನಕ್ಕೂ ಹೆಂಗಸರು ತೊಡುವ ಬಳೆಗಳು ದೊಡ್ಡ ದೊಡ್ಡದಾಗುತ್ತಿವೆಯಂತೆ.

—ಸರಿ. ಇನ್ನು ಮುಂದೆ ತೋಡಾಗಳನ್ನೆ ಬಳೆಗಳೆಂದು ಉಪಯೋಗಿಸುತ್ತಾರೆ.

* * *

ಷಹರಿನ ಹೋಟಲಿನ ಮಾಲೀಕನೊಬ್ಬನು ತನ್ನ ಅತಿಥಿಗಳನ್ನು ಮನೆಯಲ್ಲಿದ್ದಂತೆಯೇ ಇರುವ ಹಾಗೆ ನೋಡಿಕೊಳ್ಳಲು ಪ್ರಯತ್ನಿಸುತ್ತಾನಂತೆ.

—ಹಾಗೆ ಮಾಡಿ ಮನೆಯಲ್ಲಿದ್ದಿದ್ದರೆ ಚೆನ್ನು ಎನ್ನುವಂತೆಯೂ ಮಾಡುತ್ತಾನಂತೆ.

ಹುರಿಗಾಳು

ಮಾವನ ಮನೆಯಲ್ಲೇ ಇದ್ದ ಅಳಿಯನಿಗೂ ಆತನಿಗೂ ಒಂದು ದಿನ ಯಾವುದೋ ಸಣ್ಣ ವಿಷಯಕ್ಕಾಗಿ ಪ್ರಾರಂಭವಾದ ಮಾತು ಜಗಳವಾಗಿ ಪರಿಣಮಿಸಿ ಮಾರಾಮಾರಿ ತನಕ ಬಂತು! ಅಳಿಯನಿಗೆ ಸಹಿಸಲಿಲ್ಲ. ಕದನ್ನ ತಿಂದು ಸಾಕಾಯಿತು. ಹಂಗಿನ ಬಾಳು, ಹೇಯವಾಗಿ ಕಾಣಿಸಿತು. ಮನೆ ಬಾಗಿಲ ಮುಂದೆ ನಿಂತಿದ್ದ ಗಾಡಿಯಲ್ಲಿ ಹತ್ತಿ ಕುಳಿತು ರೆಯಿಲು ಸ್ಟೇಷನಿಗೆ ಪ್ರಯಾಣ ಬೆಳೆಸಿದ. ಸ್ಟೇಷನ್ ಬಳಿ ಗಾಡಿಯವನಿಗೆ ಬಾಡಿಗೆ ಕೊಡುವುದಕ್ಕೆ ಹೋದಾಗ ಅವನು ಕೈ ನೀಡಲೇ ಇಲ್ಲ. "ಬೆಳಿಗ್ಗೇನೆ ಆ ಮನೆಯವರು ಬಾಡಿಗೆ ಕೊಟ್ಟಿದ್ದರು, ಸ್ವಾಮಿ! ಸಾಯಂಕಾಲದೊಳಗೆ ಯಾವಾಗಲಾದರೂ ನೀವು ಹೊರಟೇ ಹೊರಡುತ್ತೀರಿ ಅಂತ ದಿನದ ಪೂರಾ ಬಾಡಿಗೆ ಮಾತಾಡಿದ್ದರು" ಅಂದ. ಜಗಳದ ಅಂತರಂಗ ಆಗ ತಿಳಿಯಿತು ಅಳಿಯನಿಗೆ.

* *

ಜವುಳಿ ಅಂಗಡಿಯ ಮಾಲೀಕರ ಹತ್ತಿರ ಮಹಾ ಮಹಿಳೆಯರೊಬ್ಬರು "ರೀ! ಕಾಫಿ ಕಲರ್ ಸೀರೆ ತೆಗೆಯಿರಿ ನೋಡೋಣ" ಅಂದರೆ, ಅವರು, "ನಿಮ್ಮ ಮನೆಯಲ್ಲಿ ಕಾಫಿಗೆ ಎಷ್ಟು ಹಾಲು ಹಾಕುತ್ತೀರಿ ಅಂತ ಹೇಳಿದರೆ, ಆ ಬಣ್ಣದ್ದು ಆರಿಸಿ ತೆಗೆಯುತ್ತೇನೆ ತಾಯಿ'' ಅಂತ ಅನ್ನೋದೇ?

ಕಾಲೇಜು ವಿದ್ಯಾರ್ಥಿಗಳಿಬ್ಬರು ಹೊಸ ಉಪಾಧ್ಯಾಯರನ್ನು ವಿಮರ್ಶಿಸುತ್ತಿದ್ದರು.

"ಲೋ! ಈ ಮಹಾರಾಯನ ಕ್ಲಾಸಿನಲ್ಲಿ ನಿದ್ದೆ ಬರಬೇಕಾದರೆ ೨೦ ನಿಮಿಷವಾಗುತ್ತೆ. ಹಿಂದಿನವನ ಕ್ಲಾಸಿನಲ್ಲಿ ಅಬ್ಬಬ್ಬಾ ಅಂದರೆ ಹತ್ತು ನಿಮಿಷ....''

"ಹಾಗಲ್ಲ, ಅದು! ಹಿಂದಿನವರ ಕ್ಲಾಸಿನಲ್ಲೂ ಮೊದಮೊದಲು ಹಾಗೇ ಇತ್ತು. ಕಿವಿಗೆ ಅಭ್ಯಾಸವಾದರೆ, ಇವರೂನೂ ಹತ್ತು ನಿಮಿಷಗಳಲ್ಲೇ ನಿದ್ದೆ ಮಾಡಿಸುತ್ತಾರೆ."

* * *

ಸರ್ಕಸ್ ಕಂಪನಿ ಒಂದು ಬೆಂಗಳೂರಿಗೆ ಬಂದಿದ್ದಾಗ ಆನೆಗೆ ಕೆಮ್ಮಲು ಬಂತು; ವಿಪರೀತಕ್ಕಿಟ್ಟುಕೊಂಡಿತು. ಕಂಪನಿ ವೈದ್ಯರು ಜೊತೆಗೆ ಬಂದಿರಲಿಲ್ಲವಾದ್ದರಿಂದ ಯಾರನ್ನೋ ಕೇಳಿದರು ಅವರು. "ಒಂದು ಬಕೆಟ್ ತಾಯಿ ಹಾಲು ಕುಡಿಸಿ" ಅಂತ ಔಷಧಿ ಹೇಳಿದರು. ಮರುದಿನ ಅವರು ಬಂದು "ಹೇಗಿದೆ ಆನೆಗೆ?" ಅಂತ ವಿಚಾರಿಸಿದರು. "ಸ್ವಾಮಿ? ಇದಕ್ಕೆ ತಾಯಿ ಹಾಲು ಕುಡಿಸಿದ್ದೇ ತಡ, ಮಿಕ್ಕ ಆನೆಗಳಿಗೂ ಕೆಮ್ಮಲು ಬಂದುಬಿಟ್ಟಿದೆ........ಕೇಳಿ" ಅಂದರು.

* * *

ರಂಗುವಿಗಾಗಿ ಹೆಣ್ಣು ನೋಡುವುದಕ್ಕೆಂದು ಹೋಗಿದ್ದವರೆಲ್ಲರೂ ಮನೆ ಜಗುಲಿ ಮೇಲೆ ಕುಳಿತು ಟೀಕಿಸುತ್ತಿದ್ದರು.

"ಥೂ! ಅದರ ಮೂತಿ ನೋಡಿದೆಯಾ, ಮೂತಿ" ಅಂದಳು ದೊಡ್ಡ ಹುಡುಗಿ, ರಂಗು ಅಕ್ಕ. "ಅದು ಹಾಡುವಾಗ ಬಾಯಿ ಒಂದು ತರಹ ಸೊಟ್ಟಗಾಗುತ್ತೆ." ಅಂದಳು, ರಂಗು ತಂಗಿ. "ಮೈಮೇಲೆ ಒಂದು ಚೂರು ಚಿನ್ನವೇ ಇಲ್ಲ'' ಅಂದಳು ರಂಗು ಚಿಕ್ಕಮ್ಮ." "ಅನ್ನ ಕಂಡು ಆರು ತಿಂಗಳಾಯಿತೋ ಏನೋ? ಒಂದು ಕೊಡ ನೀರು ಸೇದುವುದಕ್ಕೆ ಕೂಡ ಅದಕ್ಕೆ ತ್ರಾಣ ಇದೆಯೋ ಇಲ್ಲವೋ?" ಅಪಳು ರಂಗು ತಾಯಿ. "ಅದು ಕಣ್ಣುರುಳಿಸುವುದನ್ನು ಕಂಡರೆ ನನಗೇನೋ ಭಯವಾಗುತ್ತೆ" ಅಂದಳು ರಂಗು ದೊಡ್ಡಮ್ಮ. ಎಲ್ಲರೂ ಗೊಳ್ಳೆಂದು ನಕ್ಕರು. ಆಗ, ರಂಗು ಅಜ್ಜಿ-ಅಲ್ಲೇ ಇದ್ದರು ಅವರು- "ಆವರೆ, ಒಂದು ವಿಷಯ ಮರೆತುಬಿಟ್ಟಿರಲ್ಲಾ, ನೀವು" ಅಂದರು. ಎಲ್ಲರೂ ಅವರ ಕಡೆ ತಿರುಗಿದರು. "ಒಂದು ಅನುಕೂಲ, ನೋಡಿ. ರಂಗೂನ ಹೀಗೆ ಟೀಕೆ ಮಾಡೋದಕ್ಕೆ ಆ ಹುಡುಗಿಗೆ ಯಾರೂ ಇಲ್ಲ....ಅಕ್ಕ ತಂಗಿ....ದೊಡ್ಡಮ್ಮ, ಚಿಕ್ಕಮ್ಮ....ಬಂಧುಗಳೂ ಇಲ್ಲ'' ಅಂದರು. ''ಆದ್ದರಿಂದ, ಈ ಮದುವೆ ನಡೆಯಬಹುದು. ಅಜ್ಜಿ!'' ಅಂದ ರಂಗು, ಒಳಗಿಂದ.

* * *

"ಕುಂಟ! ಸ್ವಾಮಿ! ಕುಂಟ! ಕಾಸು ಕೊಡಿ'' ಅಂತ ಅರಚುತ್ತಾ ತನ್ನ ಗಂಡನನ್ನ ಕೈಗಾಡಿಯೊಂದರಲ್ಲಿ ತಳ್ಳುತ್ತಾ ಹೋಗುತ್ತಿದ್ದ ಒಬ್ಬಾಕೆಯನ್ನ ದಯಾಮೂರ್ತಿಯೊಬ್ಬರು ಮಾತನಾಡಿಸಿದರು, ಒಂದಾಣೆ ಕೊಟ್ಟು. "ತಾಯಿ ದಿನವೂ ಇವನನ್ನ ನೀವು ಹೀಗೆ ತಳ್ಳಿಕೊಂಡು ಸುತ್ತಬೇಕೆ?'' ಅಂದರು. ಅದಕ್ಕವಳು ''ಇಲ್ಲ, ಸ್ವಾಮಿ! ದಿನವೂ ಇಲ್ಲ. ಒಂದು ದಿನ ಅವರು ಗಾಡಿಯಲ್ಲಿ ಕೂತುಕೊಳ್ಳುತ್ತಾರೆ; ಮರುದಿನ ನಾನು ಕೂತುಕೊಳ್ಳುತ್ತೀನೆ-ಅವರು ತಳ್ಳುತ್ತಾರೆ. ಹೀಗೆ, ನಮ್ಮ ಏರ್ಪಾಟು" ಅಂದಳಂತೆ. ದಯಾಸಾಗರ ಬತ್ತಿಹೋಯಿತು. ಕೊಟ್ಟ ಕಾಸು ಮಾತ್ರ ಹಿಂದಕ್ಕೆ ಬರಲಿಲ್ಲ.

* * *



''ಅಮ್ಮ, ಅಪ್ಪನನ್ನು ನೀನು ಯಾವಾಗ ಮದುವೆಯಾದೆ?"

''ಏನೂ ಅರಿಯದ ಕೆಟ್ಟದ್ದಕ್ಕೂ ಒಳ್ಳೆಯದಕ್ಕೂ ವ್ಯತ್ಯಾಸ ತಿಳಿಯದ ಹುಡುಗಿಯಾಗಿದ್ದಾಗ ಮಗು."

ಅ-ಭಾಸಾ ಶಾಸ್ತ್ರ

ಲೇಖ ೧

(ಲೇಖಕ:—**ಶಿವರಾಮ ಕಾರಂತ**)

ಮನುಷ್ಯನ ಜ್ಞಾನದ ಮೂಲವನ್ನು ತಿಳಿಯುವುದಕ್ಕೆ ಅವನ ನುಡಿಯನ್ನು ಕುರಿತಾದ ಶೋಧನೆಯು ಮಹತ್ವದ್ದಷ್ಟೆ. ಈ ಶಾಸ್ತ್ರವನ್ನು ಅ-ಭಾಸಾಶಾಸ್ತ್ರವೆಂದೂ ಪೈಲಾ - ಲಜಿಯೆಂದು ಕರೆಯುತ್ತಾರೆ. ಆದರೆ ಇತ್ತೀಚೆಗೆ ಬರುತ್ತಿರುವ ಹಲವು ಪಂಡಿತರ ಲೇಖಗಳನ್ನೋದಿ ನಾನು ಬೆರಗಾಗಿದ್ದೇನೆ. ಅವರ ಸಿದ್ಧಾಂತ ದಂತೆ ಕನ್ನಡದ ಪ್ರತಿಯೊಂದು ಮಾತೂ ಸಂಸ್ಕೃತದಿಂದಲೇ ಬಂದಿರಬೇಕೆಂದೇ ನಿರ್ಣಯವಾದಂತಿದೆ. ಆದರೆ ಅದರ ವಿರುದ್ಧವಾಗಿ ಯೋಚನೆ ಮಾಡಲು ಹೊರಟ ವರೇ ಇಲ್ಲ. ಅ-ಭಾಸಾಶಾಸ್ತ್ರವು ಮಲಯದ ರಬ್ಬರಿನಂತಿರುವ ವಸ್ತು. ಎಳೆದಂತೆ ಜಗ್ಗಬಲ್ಲ ನಿಷ್ಕಳಂಕವಾದ ಆಯುಧ. ಅದು ಕನ್ನಡಕ್ಕೋ, ಅದರ ಸೋದರ ಭಾಷೆಗ ಳಾದ ತುಳು ತಮಿಳುಗಳಿಗೋ ವಿಧೇಯವಾಗಬಾರದೇಕೆ ?

ಸಂಸ್ಕೃತವೊಂದೇಯೇನು ? ಲೇಟಿನು, ಬಾಂದು, ಚೀನಿ, ಇಂಗ್ಲೀಷು ಭಾಷೆಗ ಳೆಲ್ಲ ಕನ್ನಡಮ್ಮನ ಕಳೆದು ಹೋದ ಮತ್ತು ಕದ್ದು ಹೋದ ಕುವರ ಕುವರಿಯಾಗಿರಲಾ ರವೇ ?

ಪ್ರಾಯಶಃ ಉದಾಹರಣೆಯೊಂದಿಗೆ ನಾನು ಪ್ರತಿಪಾದಿಸಿದಲ್ಲಿ ನೀವು ಒಪ್ಪುವಿ ರೆಂದು ಈ ಲೇಖನವನ್ನು ಉದಾಹರಣೆಯಿಂದಲೇ ಮುಂದುವರಿಸುತ್ತೇನೆ. ಉದಾ ಹರಣೆ—ಎಂಬುದು ಸಂಸ್ಕೃತವೆಂದು ಬೆದರಬೇಕಾಗಿಲ್ಲ. ಕನ್ನಡವಲ್ಲದ ಸಂಸ್ಕೃತ ವೆಲ್ಲಿನದು ? ಚಿಕ್ಕದೊಂದು ಸಂಗತಿಯನ್ನು ಉದ್ದವಾಗಿ-ಹರಿಸಿದ್ದಲ್ಲಿ ಅದೇ ಉದಾ ಹರಣೆ.

ಯಾವ ಭಾಷೆಯಿಂದ ಯಾವ ನುಡಿ ಹುಟ್ಟಿತು ಎಂಬುದಕ್ಕೆ ಮೂಲತಃ ನಾವು ಮನುಷ್ಯನ ತೀರ ಸಮೀಪದ ಆವರಣ, ಸಂಬಂಧಿಗಳನ್ನು ಹುಡಕಬೇಕು. ಏರೋಪ್ಲೇ ನಿಗೆ ಏನು ಎನ್ನುತ್ತಾರೆಂದು ತುದಿಯಿಂದ ತೊಡಗುವುದಲ್ಲ. ಮನುಷ್ಯನ ಸರ್ವಾವಸ್ತು ವಸ್ತ್ರಗಳಾವುವು ? ಸಂಬಂಧಗಳಾವುವು—ಈ ವಸ್ತು ಮತ್ತು ಸಂಬಂಧಸೂಚಕ ಶಬ್ದ ಗಳನ್ನು ಆರಿಸಿ ಅವುಗಳ ವಿಮರ್ಶೆ ಮಾಡುವ ಮನುಷ್ಯ—ತೀರ ಮೊದಲನೆಯ ವಸ್ತು; ಹೆಂಡತಿ, ಗಂಡ; ಮಗ, ಮಗಳು; ಅಜ್ಜ, ಅಜ್ಜಿ; ಸಮಿಪದ ವಸ್ತುಗಳಾಗಿ— ಮನೆ, ದನ, ನಾಯಿ, ಎಮ್ಮೆ, ಹಣ್ಣು ಇವುಗಳನ್ನು ಪ್ರಕೃತ ವಿಮರ್ಶೆ ಮಾಡುವ.

ಮನುಷ್ಯ-ಎಂಬುದು 'ಮನು'ವಿಂದ ಬಂದಿತೆನ್ನುವವರು ಉಂಟು. ಇದು ಭಾಷೆ

ಯ ತರ್ಕ ಸರಣಿಯಲ್ಲ,ಹಿಂದೂ ಪುರಾಣವಾದಕ್ಕೆಸಂಬಂಧಿಸಿದ್ದು. ಮನೆ-ಮನೆಯವ-ಮನುಷ್ಯ ಎಂಬುದೂ, man-ಎಂಬುದೂ ಕನ್ನಡದ ಮನೆಯಿಂದ ಬರಲಿಲ್ಲವೇ! "ಮನೆ''ಗಳ ಸಂಖ್ಯೆಬೆಳೆದು ಬಂದಮೇಲೆ ಅವುಗಳ ಬಹೆಳತನವೇ ''ಮನಿ" ''ಮೆನಿ" ಎಂಬ ಇಂಗ್ಲೀಷ್ ಪದಗಳಿಗೂ ಕಾರಣವಾಯಿತು.

"ಮನೆ"ಯೆಂಬ ಕನ್ನಡಪದವು ಎಸ್ಕಿಮೋ ಭಾಷೆಯ ಈಗ್ಲೂ Igloo-(ಮನೆ) ಗೂ ಕಾರಣವಾಯಿತು. ಮನುಷ್ಯನು ಮನೆಯಲ್ಲಿ ಈಲಾಗುತ್ತಾನೆ (ಏಳುಗುವನು) "ಈಲು" ಎಂಬುದರಿಂದ ತುಳು, ತಮಿಳುಗಳ "ಇಲ್'' (ಮನೆ) ಪದ ಉಂಟಾಯಿತು. ಇಲ್ ಎಂಬುದು ಮನೆಯಾದರೆ, ಮನೆಯಲ್ಲಿದ್ದು ಬರುವ ಬೇನೆಗೂ ಇಲ್= Ill ಅದರಿಂದ Illness ಎಂಬ ಹೆಸರಾಯಿತು. ಇಲ್ ಪದದಿಂದಲೇ ಧ್ರುವ ವಲಯವ ಮನೆಯಾದ-ಇಲ್ಲೂ-ಈಗ್ಲೂ Igloo ಆಯಿತು !

ಗಂಡ=ಇದನ್ನೆ ಇಂಗ್ಲೀಷಿನಲ್ಲಿ ಬರೆದರೆ Genda ಎಂದೂ ಗಂಡ-ಮನುಷ್ಯ ಎಂಬುದು Gendelman ಅಥವ 'ಡ'ಕ್ಕೆ'ಟ' ಆದೇಶವಾಗಿ Gentlaman ಎಂದೂ ಆಯಿತು. ಹೆಂಡತಿ ಎಂಬುದು ನಿಧಾನವಾಗಿ ವಿಕಲ್ಪಗೊಂಡು ಹಂಸತಿ, ಹೌಸ್‌ಸತಿ, ಹಸೀಫ್ ಎಂದೂ ಅದೇ 'ವೈಫ್' ಎಂದೂ ಆಗಿರಬೇಕು: ಬೇಕು ಎಂಬ ಅನುಮಾನವಿಲ್ಲ; ಆಗಿದೆ.

ಕನ್ನಡದಲ್ಲಿ ಮಮತೆಯ ಚಿಹ್ನೆಯಾದ ಮಗ, ಮಗಳು ಎಂಬ ಮಾತನ್ನು ಸಂಸ್ಕೃತ ಬಲ್ಲವರು ಕನ್ನಡಿಗರ ಮೇಲಣ ವೈರದಿಂದ "ಮೃಗ"ಕ್ಕೆ ಸೆಳೆದುಕೊಂಡುದರಿಂದ ಅದು ಅಲ್ಲಿ ಭಿನ್ನಾರ್ಥಕ್ಕೆ ಕಾರಣವಾದುದರ ಉದಾಹರಣೆಯಾಗಿದೆ. ಆದರೆ ಮೊದಲಿಗೆ ನಮ್ಮ ನಾಡಿಗೆ ಬಂದ ಇಂಗ್ಲಿಷರು-ಚಿಕ್ಕವನನ್ನು ಮಗನೆಂದು ಅರ್ಥ ಕಲ್ಪಿಸಿಕೊಂಡರು. "ಮಗ"ಎಂದರೆ "ಸಣ್ಣ" ಎಂದು ಇಂಗ್ಲೀಷರು ಅರ್ಥಮಾಡಿಕೊಂಡು ತಮ್ಮ ಮಕ್ಕಳನ್ನು 'ಸನ್' (Son) ಎಂದು ಅರ್ಥಮಾಡಿ ಕರೆದರು.

ಅಜ್ಜ, ಅಜ್ಜಿ-ಎಂಬ ಮಾತುಗಳನ್ನು ತಿಳಿಯಲಾರವ ಪರದೇಶೀಯರು ವಯಸ್ಸಾದವರನ್ನು ಹಾಗೆ ಕರೆಯುವುದು ಕಂಡು, ಅಜ್ಜ-ನೆಂಬಮಾತು ವಯಸ್ಸಿಗೆ ಅನ್ವಯಿಸುವುದೆಂದು ಊಹಿಸಿ Age-'ಏಜ್', ಏಜ್‌ಡ ಎಂಬ ಭಿನ್ನಾರ್ಥಕ್ಕೆ ಅದನ್ನೇ ಬಳಸಿಕೊಂಡರು. ಆದರೆ ನಮ್ಮ ಮೇಲೆ ಅಧಿಕಾರ ಮಾಡಲು ಬಂದ ಸಂಸ್ಕೃತ ನುಡಿಯ ಜನರು ಇಲ್ಲಿ ಅಪಾರ್ಥ ಮಾಡಿದರು. ಅಜ್ಜನೆಂಬ ಮಾತು ಹಿರಿಯ ಋಷಿಯಂತಿರುವ, ಗಡ್ಡ ಬಿಟ್ಟ ಜನರನ್ನು ಕುರಿತು ಕರೆಯುವುದನ್ನೆ ಕಂಡು, 'ಅಜ'-ಹೋತ್ರ ಎಂಬ ಅಪಹಾಸ್ಯ ನುಡಿಗೆ ಅದನ್ನು ತಿರುಗಿಸಿಕೊಂಡರು.

ಸಂಸ್ಕೃತದ ಪಿತೃ, ಇಂಗ್ಲೀಷಿನ Father-ಇವೆರಡೂ ಮನೆಯಲ್ಲಿ ಮಾತನಾಡುವ ಹಿರಿಯ ವ್ಯಕ್ತಿಗಳಿಗೆ ಸಂಕೇತವಾದುವು. ಫಾಥರ್ (ಪಿತೃ)-ಇದು ತುಳವಿನ

ಪಾತೆರ್ (ಮಾತು) ಎಂಬುದಕ್ಕೂ ಮಾತುಗಾತಿಯೆಂಬುದೇ ಮಾತೃ, ಮದರ್ (Mother) ಎಂಬುದಕ್ಕೂ ಕಾರಣವಾದುವು. [ತಿರುಗಿ-ಮಾತು-ಎಂಬ ನುಡಿಯನ್ನೆ ಇಂಗ್ಲಿಷರು ಮಾತನಾಡುವ ಸಾಧನಕ್ಕಾಗಿ ಎಣಿಸಿಕೊಂಡು ಮೌತ್ (Mouth) ಎಂದು ಮಾತು-ಬರುವ ಅಂಗವನ್ನು ಕರೆದರು.]

ಇಂಗ್ಲೀಷು ಭಾಷೆ ಈ ರೀತಿಯ ಅಸ್ತ್ಯವಸ್ತವಾದ ಅರ್ಥಕ್ಕೆ ಬಹಳ ಕಾರಣವಾಗಿದೆ. ನಮ್ಮಲ್ಲಿನ ಹಾಲು-ಹಯನು ಎಂಬುದರ ಹಯನು-ಎಂಬ ಮಾತನ್ನು ಅವರು ದನಕರಗಳಿಗೇ ಅನ್ವಯಿಸಿ ಅರ್ಥ ಮಾಡಿದರು. "ಹಯನು''-ಎಂಬುದೇ ಅವರ "Kine" ಎಂಬ ನುಡಿಗೆ ಕಾರಣವಾಯಿತು. ಸಂಸ್ಕೃತದವರು ನಮ್ಮ ದನವನ್ನು ಸುಧಾರಿಸುವೆವೆಂದು ಆ ಶಬ್ದಕ್ಕೂ ಬಾಲ ಕೂಡಿಸಿ 'ಧೇನು'-ಮಾಡಿದರು.

ನಮ್ಮವರು ನಾಯಿಯ 'ನಯ'ವಾದ ನಮ್ಮ ಗುಣವಾದವನ್ನು ಕಂಡು "ನಾಯಿ"-ಎಂದು ಬಳಿಗೆ ಕರೆದರು. ನಾಯಿಯು ನಮ್ಮಲ್ಲಿ ಮನೆಯ ಆಳಿನಂತಿದ್ದುದು ಅವರಿಗೆ ಅಸೂಯೆಯೆನಿಸಿ, ಅವರು ಮನೆಯ ಯಜಮಾನ ನಾಯ-ಇಕ-ನಾಯಕ-ಎಂದು ಕರೆದರು.

ಈಗ ಎಮ್ಮೆ ಎಂಬ ಮಾತನ್ನು ಪರಿಶೀಲಿಸುವ. ಅದು ನಮಗೆ ಮಾಡಿದ ಉಪಕಾರವನ್ನು ಎಣಿಸಿ ಕನ್ನಡ ಜನರು ''ಅಮ್ಮಾ" ಎಂದೇ ಅದನ್ನು ಕರೆದರು. 'ಅಮ್ಮ'ವೇ "ಅಮ್ಮ" ಎಮ್ಮೆಯಾಯಿತು. ಆದರೆ ನಮ್ಮ ಜನರ ಪ್ರೀತಿಯ ವಸ್ತು ಸಂಸ್ಕೃತದವರ ಅಪ್ರೀತಿಯದು. ನಮ್ಮ ಎಮ್ಮೆಯ ಅಮೃತ ಸಮಾನವಾದ ಹಾಲು ಅವರ ವಿಷ. ಆದರಿಂದಲೇ ಅವರು ಅದೇ ಪ್ರಾಣಿಯನ್ನು ಮಹಾ-ವಿಷ ಎಂದು ಕರೆಯಲು ಹೇಸಲಿಲ್ಲ ಈಗ ಆರೂಪವಳಿದು ಬರಿಯ 'ಮಹಿಷ' ವಿಷ್ಟೆ ಉಳಿದಿದೆ.

ಕನ್ನಡದ ಹಣ್ಣು-ಎಂಬ ಒಂದು ಮಾತು ಸಂಸ್ಕೃತ ಜನರಿಗೆ ಸಮನಾಗಿ ಅರ್ಥವಾಗದೆ ಹೋಯಿತು. ಇಲ್ಲವಾದರೆ ಅದಕ್ಕೆ ಅಪಾರ್ಥವಾಗುತ್ತಿತ್ತು. 'ಹಂ' ಎಂದು ಒಂದೇ ಸಂಗಿಗೆ ಉಣ್ಣುವ ವಸ್ತುವನ್ನು ನಾವು "ಹಣ್ಣೀ" ಎಂದೆವು. ಆದರೆ ಆ ಹಣ್ಣು-ಎಂಬ ಮಾತಿಗೂ ನಮ್ಮ "ಹಣೆ''-ಎಂಬ ಮಾತಿಗೂ ಸಂಸ್ಕೃತದವರು ಒಂದೇ ಅರ್ಥವೆಂದು ತಿಳಿದು ಹಣೆಯನ್ನು-"ಫಾಲ" ಎಂಬುದಕ್ಕೆ ಸಮಾನಿಸಿ, ಅದರಿಂದ 'ಫಲ'-ಎಂಬ' ಶಬ್ದವನ್ನೇ ಹೊರಡಿಸಿದರು.

ಆದರೆ ಒಟ್ಟಿಂದ ಹೇಳುವುದಾದರೆ ಈ ಲೇಖನದಲ್ಲಿ ತೋರಿಸಿದ ಉದಾಹರಣೆಗಳಿಂದ ಎರಡು ತೀರ್ಮಾನಗಳಿಗೆ ಕಾರಣವಾಗುತ್ತದೆ. ಕನ್ನಡ ಶಬ್ದಗಳಿಂದ ಇಂಗ್ಲಿಷ್ ಪದಗಳು ಅರ್ಥ ವ್ಯತ್ಯಾಸದಿಂದಾದುವೆಂದೂ, ಸಂಸ್ಕೃತದಲ್ಲಿ ಅವು ಉದ್ದೇಶಪೂರಿತವಾದ ವಿಕಲ್ಪಾರ್ಥಕ್ಕೆ ಕಾರಣವಾಗಿವೆಯೆಂದೂ ಹೇಳಬಹುದು.

ಈ ಎರಡು ಸೂತ್ರಗಳನ್ನು ಗಮನಿಸಿದಲ್ಲಿ ಅನೇಕ ಭಾಸಾಶಾಸ್ತ್ರದ ತೊಡಕುಗಳನ್ನು ಬಗೆಹರಿಸಬಹುದು.

ಎದುರುಮನೆ ಮಕ್ಕಳು

●

ಮೊದಮೊದಲು ನನಗೆ ಅರಿವೇ ಆಗಲಿಲ್ಲ. ನನ್ನ ಪಾಟ್ಟಿಗೆ ನಾನು ನನ್ನ ರೂಮಿನಲ್ಲಿ ಕಿಟಕಿಯ ಹತ್ತಿರ ಕುಳಿತು ಕಾದಂಬರಿ ಬರೆಯುತ್ತಿದ್ದೆ, ದೇವರಾಜ ಬಹದ್ದೂರ್ ಧರ್ಮನಿಧಿಗೆ ಕೊಟ್ಟು ಕಳುಹಿಸಿ ಐನೂರು ರೂಪಾಯಿ ಸಂಪಾದಿಸೋಣ ಅಂತ. ೩೦೦ ಪುಟದಷ್ಟು ಕಾದಂಬರಿ ಮುಂಬರಿದಿತ್ತು. ಕಥಾನಾಯಕನ ಕಷ್ಟಪರಂಪರೆಗಳು ಪರ್ವತಾಕಾರವಾಗಿ ಅವನ ಎದೆಯ ಮೇಲೆ ಕುಳಿತು ಅವನ ರಕ್ತವನ್ನು ಹೀರಿತ್ತು. ಅನೀಮಿಯಾದಿಂದ ನರಳುತ್ತಾ ಅವನು ಬಾವಿಯೊಳಕ್ಕೆ ಧುಮುಕಿದ್ದ; ನಡುದಾರಿಯಲ್ಲಿ ಕೈಗೆ ಸಿಕ್ಕಿದ ಒಂದು ಕಾಡುಗಿಡವನ್ನು ಹಿಡಿದು ನೇತಾಡುತ್ತಿದ್ದ. ಮುಂದಕ್ಕೆ ಅವನನ್ನ ಏನುಮಾಡಬೇಕು ? ಕೆಳಕ್ಕೆ ತಳ್ಳಿ, ಚರಮಶ್ಲೋಕ ಬರೆದು, ಬಹುಮಾನ ಪಡೆಯೋಣವೇ ? ಅಥವಾ, ಯಾರನ್ನಾದರೂ ಕರೆಸಿ ಮೇಲಕ್ಕೆತ್ತಿ ಮೂರು ಅಧ್ಯಾಯಗಳನ್ನು ಮತ್ತೆ ಬರೆದು ಡಾಕ್ಟರನ್ನು ಕರೆಸಿ ಶಾಸ್ತ್ರೋಕ್ತವಾಗಿಯೇ ಸಾಯಿಸೋಣವೇ ? ಎಂಬ ಆಂದೋಳನಕ್ಕೆ ಸಿಲುಕಿತ್ತು ನನ್ನ ಮೆದುಳು. ಇಂತಹ ಸನ್ನಿವೇಶದಲ್ಲಿ ಕಿಟಕಿಯಿಂದಾಚೆ ರಸ್ತೆಯ ಮೇಲೆ ತಿರುಗಾಡುವ ಜನರನ್ನು ನೋಡುವುದು ನನ್ನ ಪದ್ಧತಿ. ನನ್ನ ಕಣ್ಣಿಗೆ ಬೀಳುವ ಮೂರನೆಯ ವ್ಯಕ್ತಿ, ಹೆಂಗಸಾಗಿದ್ದಾರೆ, ಕಥಾನಾಯಕನನ್ನು ಕೆಳಕ್ಕೆ ತಳ್ಳಿಬಿಡುವುದು, ಗಂಡಸಾಗಿದ್ದರೆ ಮೇಲಕ್ಕೆಳೆಸುವುದು ಎಂದು ನಿರ್ಧರಿಸಿದೆ. ಕಿಟಕಿಯ ಹತ್ತಿರಹೋಗಿ ನಿಂತುಕೊಂಡೆ. ಮಧ್ಯಾಹ್ನ ಒಂದುಗಂಟೆ ಸೂರ್ಯ ತಲೆಯ ಮೇಲಕ್ಕೆ ಸರಿಯಾಗಿ ಉರಿಯುತ್ತಿದ್ದಾನೆ. ಒಂದು ಪ್ರಾಣಿಯೂ ಇಲ್ಲ........ಆಕಳಿಸಿದೆ. ನನ್ನ ದೃಷ್ಟಿ ಎದುರುಮನೆ ಕಿಟಕಿಯ ಮೇಲೆ ಬಿತ್ತು.

ಆ ರೂಂನಲ್ಲಿ ಕಿಟಕಿಯ ಕಂಬಿಗಳನ್ನು ಹಿಡಿದುಕೊಂಡು ಬೋನಿಗೆ ಹಾಕಿದ ಕಪಿಗಳಂತೆ ಎರಡು ಮಕ್ಕಳು ಕುಳಿತಿದ್ದುವು. ಮುದ್ದಾದ ಮನುಷ್ಯಮರಿಗಳು! ಒಗೆದ ಉಡುಪು ! ಬಾಚಿದ ತಲೆಕೂದಲು ! ಸಿಂಬಳ ರಹಿತ ಮುಖ ! ಅವಳಿಜವಳಿಯಂತೆ ಎರಡೂ ಎರಡೂವರೆ, ಮೂರು ವರ್ಷದಷ್ಟು ಪ್ರಾಯದವು. ನನ್ನನ್ನೇ ದುರುದುರನೆ ದುಂಡುಕಣ್ಣುಗಳನ್ನುರುಳಿಸಿ ನೋಡಿದುವು ! ನಾನೂ ದುರುದುರಿಸಿದೆ.

ಅಂದಿನಿಂದ ಆ ಮಕ್ಕಳ ವಿಷಯವಾದ ನನ್ನ ಕುತೂಹಲ ಹೆಚ್ಚಿತು. ಅದೇ ಅವರ ಆಟದ ಕೋಣೆ ಅಂತ ಗೊತ್ತು ಮಾಡಿದೆ. ಅವರ [illegible] ಹೊತ್ತಿಗೆ ಅವರಿಗೆ ಹಾಲು ತಂದು ಕೊಡುತ್ತಿದ್ದುದು ಆ ರೂಮಿಗೇನೆ. ಹುಡುಗಿಗೆ ಬೆಳ್ಳಿ ಗಲಾಸು ! ಹುಡುಗನಿಗೆ ಬೆಳ್ಳಿ ಬಟ್ಟಲು ! ಕುಡಿದಮೇಲೆ ಅವುಗಳನ್ನು ಅವರು

ಕಿಟಕಿಯಲ್ಲೇ ಇಡುತ್ತಿದ್ದರು. ಊಟಕ್ಕೆ ಸರಿಯಾಗಿ ಆಳು ಬಂದು ತೆಗೆದುಕೊಂಡು ಹೋಗಿ ತೊಳೆದಿಡುವನು. ಇತ್ತೀಚೆಗೆ ಅವರಿಬ್ಬರಿಗೂ 'ಬಾಯಿ ಹಾರ್ಮೋನಿಯಂ' ಗಳನ್ನು ಕೊಂಡುಕೊಟ್ಟಿದ್ದಾರೆ. ಅವರಿಬ್ಬರಿಗೂ ಬಿಸ್ಕತ್ತೆಂದರೆ ಆಗದು. ಏಕೆಂದರೆ ಕಿಟಕಿಯ ಹೊರಕ್ಕೆ ಅವನ್ನ ಅವರು ಆಗಾಗ ಎಸೆಯುತ್ತಿದ್ದರು. ಒಂದು ಸಲವೂ ಆ ಕೋಣೆಯೊಳಕ್ಕೆ ಅವರ ತಾಯಿ ಬಂದ ಹಾಗೆ ನನಗೆ ಕಾಣಿಸಲಿಲ್ಲ. ತಬ್ಬಲಿಗಳೋ ಏನೋ ಪಾಪ ?

ನನಗೂ ಅವರಿಗೂ ದಿನೇ ದಿನೇ ಸ್ನೇಹ ಬೆಳೆಯಿತು. ಒಂದು ದಿನ ನಾನು ಕಿಟಕಿಯಿಂದ ನನ್ನ ಕರ್ಚೀಫನ್ನು ಬೀಸಿದೆ. ಅವರಿಬ್ಬರೂ ಕಿಟಕಿಯಿಂದಿಳಿದು ಒಂದು ಬಣ್ಣದ ಬಟ್ಟೆ ತಂದು ಮತ್ತೆ ಹತ್ತಿ ಕುಳಿತು ಅದನ್ನು ಬೀಸಿ ನಕ್ಕರು. ಅಂದಿನಿಂದ ನಾನು ಆಗಾಗ ಬಿಳಿ ಬಾವುಟ ಬೀಸಿ ಅವರನ್ನು ಆನಂದಗೊಳಿಸುತ್ತಿದ್ದೆ. ನನ್ನ ತಲೆಯನ್ನು ಕಂಡ ಕೂಡಲೇ ಅವರು ಕೈ ಚಪ್ಪಾಳೆ ಹೊಡೆದು ಮನಮೋಹಕವಾಗಿ ನಗುತ್ತಿದ್ದರು. ನಾನು ಮೆಲ್ಲಗೆ ನೆಲದಮೇಲೆ ಕೂತು, ಮುಂದುವರಿದು, ಥಟಕ್ಕನೆ ತಲೆ ತೋರಿಸಿ, ಅವರನ್ನು ಮತ್ತಷ್ಟು ನಗುವಂತೆ ಮಾಡಿದೆ. ಇದ್ದಿಕ್ಕಿದ್ದ ಹಾಗೆ ಕೆಳಕ್ಕೆ ಕುಸಿದು ಮಾಯವಾದಾಗಲಂತೂ ಅವರ ಆನಂದಕ್ಕೆ ಪಾರವೇ ಇರಲಿಲ್ಲ.

ಒಂದೆರಡು ದಿನಗಳ ಪರಿಚಯವಾದ ಮೇಲೆ, ಅವರೇ ಮೊದಲು ಬಣ್ಣದ ಬಟ್ಟೆ ಬೀಸುವುದಕ್ಕೆ ಪ್ರಾರಂಭಮಾಡಿದರೆ, ಆಗ ನಾನೂ ನನ್ನ ಕರ್ಚೀಫ್ ಬೀಸದೆ ಇದ್ದರೆ ಅವರು ಗಟ್ಟಿಯಾಗಿ ಅಳುವುದಕ್ಕೆ ಮೊದಲು ಮಾಡುವರು. ಆಗ ನನ್ನ ಕರುಳೇ ಕಿತ್ತು ಬರುವ ಹಾಗಾಗುವುದು. ಸರಿ ! ನಾನು ಕಾದಂಬರಿ ನಿಲ್ಲಿಸಿ ಕಿಟಕಿಯ ಹತ್ತಿರ ಕಾದು ಕರ್ಚೀಫ್ ಬೀಸಿ ಮತ್ತೆ ಕುಳಿತುಕೊಳ್ಳುವ ಹೊತ್ತಿಗೆ ಅವರು ಬಾಯಿ ಹಾರ್ಮೋನಿಯಂ ಬಾರಿಸುತ್ತಾ ಮತ್ತೆ ನನ್ನನ್ನ "ರೀ !" "ರೀ" ಎಂದು ಕೂಗುವರು.

ಮತ್ತೊಂದು ದಿನ ಆ ಗಂಡು ಕೂಸು ಒಂದು ಕ್ಯಾಟ್ ಬಿಲ್ಲನ್ನು ಹಿಡಿದು ಕೊಂಡು ನನ್ನ ಮುಖಕ್ಕೆ ಗುರಿಯಿಟ್ಟು ಕಲ್ಲು ಹೊಡೆಯುವಂತೆ ಮಾಡಿತು. ಅದು ನನ್ನ ಮೂಗಿನ ತುದಿಗೆ ತಗುಲಿದ ಹಾಗೆ ನಾನು ನಟಿಸಿ 'ಗೊಳೋ' ಅಂತ ಅತ್ತೆ. ನನ್ನ ಕಪಟಪ್ರಲಾಪ ಬಹು ಚೆನ್ನಾಗಿತ್ತು ಅಂತ ಕಾಣುತ್ತೆ. ಏಕೆಂದರೆ, ಹುಡು ಗರು ಮತ್ತೆ ಮತ್ತೆ ನನ್ನ ಮುಖಕ್ಕೆ ಗುರಿಯಿಟ್ಟು ಹೊಡೆದರು. ಕಡೆಗೆ ಒಂದು ಕಲ್ಲು ಬಂದು ನನ್ನ ಕನ್ನಡಕವನ್ನು ಛೇದಿಸಿತು. ಆಗ ನಾನು ಮತ್ತೆ ಕುರ್ಚಿಯಲ್ಲೇ ಕುಳಿತು ಕಾದಂಬರಿಯನ್ನು ಮುಂದುವರಿಸಿದೆ.

ಸ್ವಲ್ಪ ಹೊತ್ತಿನಲ್ಲಿ ನನಗೇ ಬೇಜಾರಾಯಿತು. ಮತ್ತೆ ಕಿಟಕಿಯಲ್ಲಿ ಕಾಣಿಸಿ ಕೊಂಡೆ. ಆಗ, ಎದುರು ಮನೆ ಹುಡುಗಿ ನನಗೆ ಒಂದು ಗೊಂಬೆಯನ್ನು ತೋರಿಸಿ ದಳು. ಯಾವುದೋ ನೀಗ್ರೋ ಗೊಂಬೆ ! ಅಂತಹ ಗೊಂಬೆಗಳನ್ನು ಸಣ್ಣ ಮಕ್ಕಳ ಕೈಗೆ ಕೊಡಬಾರದು ಎಂದು ನನಗೆ ತೋರಿತು. ನನ್ನ ಮೇಜಿನ ಮೇಲಿದ್ದ ಗಾಂಧಿ

ಜಿಯವರ ಸಣ್ಣ ವಿಗ್ರಹವೊಂದನ್ನು ನಾನೂ ಕಿಟಕಿಯ ಹೊರಗೆ ಹಿಡಿದು ಅಲ್ಲಾಡಿಸಿ ಅವರಿಗೆ ತೋರಿಸಿದೆ. 'ನಾನೂ ಒಬ್ಬ ದೊಡ್ಡ ಮಗು ! ನನ್ನ ಹತ್ತಿರವೂ ಗೊಂಬೆ ಗಳಿವೆ' ಎಂದು ತೋರಿಸಿ ಜಂಬದ ಚಪಲ ತೀರಿಸುತ್ತಿದ್ದೇನೆ, ಎಂದು ಆ ಮಕ್ಕಳು, ತಿಳಿದುವೋ ಏನೋ ? ತಕ್ಷಣವೇ ಹುಡುಗ ಕಿಟಿಕಿಯಿಂದ ಇಳಿದು ಓಡಿಹೋಗಿ ಮತ್ತೆ ಹತ್ತಿ ಕುಳಿತು ಕಂಬಿ ಸಂದಿನಲ್ಲಿ ಕೈ ನೀಡಿ ನನಗೆ ಒಂದು ರೆಯಿಲು ಇಂಜಿನ್ನನ್ನು ತೋರಿಸಿದ. ನನಗೆ ರೇಗಿತು. ಕೇವಲ ಮಕ್ಕಳಿಗೆ ಸೋಲು ವುದೇ ಎಂದೆನಿಸಿತು. ಮಹಡಿ ಮೇಲೆ ಹೋಗಿ ಒಂದು ಕ್ರಿಕೆಟ್ ಬ್ಯಾಟನ್ನು ಹುಡುಕಿ ತಂದೆ. ಕಷ್ಟಪಟ್ಟು ಕಿಟಕಿಯ ಕಂಡಿಯ ಮೂಲಕ ತುರುಕಿ ಬೀಸಿದೆ. ಮಕ್ಕಳ ಮೋರೆ ಸಪ್ಪಗಾಯಿತು....ಕಾದಂಬರಿಯನ್ನು ಮುಂದೆ ಸಾಗಿಸಲು ಕುರ್ಚಿಯಲ್ಲಿ ಕುಳಿತೆ.

ಹತ್ತು ಪಂಕ್ತಿ ಬರೆದು ಮುಗಿಸಿ, ಬಾವಿಗೆ ಬಿದ್ದ ನಾಯಕನನ್ನು ಕಟ್ಟೆಮೇಲೆ ಮಲಗಿಸಿ, ಸ್ನ್ಯಾಕಟುಗಳ ಕೈಯಿಂದ ಅವನಿಗೆ ಚಿಕಿತ್ಸೆ ನಡೆಸುವುದರೊಳಗೆ, ರಸ್ತೆ ಆಚೆ ಯಿಂದ "ರೀ" "ರೀ" ಎಂಬ ದನಿ ಕೇಳಿಬಂತು. ಮನಸ್ಸಿಲ್ಲದ ಮನಸ್ಸಿನಿಂದ, ಬೇರೆ ಬೀದಿಯಲ್ಲಿ ಬೇರೆ ಮನೆ ಹುಡುಕಿ ಬದಲಾಯಿಸಬೇಕೆಂದು ನಿರ್ಧಾರ ಮಾಡಿಕೊಂಡು ಕುರ್ಚಿಯಿಂದ ಎದ್ದೆ. ಹುಡುಗಿ ತನ್ನ ತಲೆಯ ಮೇಲೆ ಒಂದು ನೀಲೀ ಕಾಗದದ ಟೋಪಿಯನ್ನಿರಿಸಿಕೊಂಡು ನಗುತ್ತಿದೆ. ನನಗೆ ದಿಕ್ಕು ತೋಚದೆ ಹೋಯಿತು. ನನ್ನ ಕೋಣೆಯಲ್ಲಿ ನೀಲೀ ಕಾಗದ ಇರಲಿಲ್ಲ-ಆಳನ್ನು ಅಂಗಡಿಗೆ ಕಳುಹಿಸಿ ತರಿಸುವ ಹಾಗಿಲ್ಲ. ನನ್ನ ಸರಸಸಲ್ಲಾಪವೊಂದೂ ಆಳಿಗೆ ತಿಳಿಯದು...............ಸದ್ಯಃ ದೇವರು ಕೊಟ್ಟ ಮೆದುಳನ್ನೇ ಉಪಯೋಗಿಸಿದೆ. ಇಲೆಕ್ಟ್ರಿಕ್ ದೀಪದ ಮೇಲಿನ ನೀಲಿ ಷೇಡನ್ನೇ ಕಳಚಿ ತೆಗೆದು ತಲೆಯಮೇಲೇರಿಸಿಕೊಂಡು ಕಿಟಕಿಯಿಂದ ಹಲ್ಲು ಕಿರಿದೆ. ಅವೆರಡೂ ನಕ್ಕು ನಕ್ಕು ಸುಸ್ತಾದುವು. ಆಗಿನ ಉತ್ಸಾಹದಲ್ಲಿ ನನಗೆ ವೈಮೋ ಲೀ ಪ್ರಜ್ಞೆಯೇ ಇರಲಿಲ್ಲ. ತಕ್ಷಣವೇ ಆ ಮಕ್ಕಳನ್ನು ಮತ್ತಷ್ಟು ನಗಿಸುವುದಕ್ಕಾಗಿ ಶಾಯಿ ಕುಡಿಕೆಯಿಂದ ಮಸಿ ತೆಗೆದು ಮೀಸೆ ಬಳಿದುಕೊಂಡು ಅವರಿಗೆ ಮೂತಿ ತೋರಿಸಿದೆ.

ಆಗ ನನ್ನ ಮಾವವರು-ಆಗತಾನೆ ಅವರೂರಿಂದ ಬಂದರು-ನನ್ನ ರೂಮಿನೊಳಕ್ಕೆ ನುಗ್ಗಿದರು !

ನನ್ನ ಅವಸ್ಥೆನೋಡಿ ಅವರು ತಾವು ಬಂದ ಗಾಡಿಯಲ್ಲೇ ಸರಸೂನ ಊರಿಗೆ ಕರೆದುಕೊಂಡು ಹೋದರು. ಸಾಯಂಕಾಲವೇ ಅವರ ಮಾತಿನಮೇಲೆ ಹುಚ್ಚಾಸ್ಪತ್ರೆ ಡಾಕ್ಟರು ನನ್ನ ಮನೆಗೆ ಬಂದರು. ನಾನೆಷ್ಟು ಹೇಳಿದರೂ ಅವರು ನಂಬಲೇ ಇಲ್ಲ.

ನನ್ನ ಕಾದಂಬರಿಯನ್ನ ಅವರು ತೆಗೆದುಕೊಂಡು ಹೋಗಿದಾರೆ. ಓದಿ ನೋ ಡಲಿ, ನನಗೇನು ? ಓದಿ ಮುಗಿಸುವುದರೊಳಗೆ ಅವರಿಗೇ ಬರುತ್ತೆ ಹುಚ್ಚು !



ಯುದ್ಧದ ಸೋಜಿಗ!

ಹೊಸ ಪತ್ರಿಕೆಗಳನ್ನು ಕೊಂಡು
ಹಳೇ ಕಾಗದ ಎಂದು ಮಾರಿ
ಧನಿಕನಾದ ಬನಿಯ.

ಫಾ ಸಾ ದೆ

ರಂಗಣ್ಣನವರೂ ಅವರ ಭಾವಮೈದುನಾದಿ ಸಂಬಂಧಿಕರೂ ನನ್ನ ಪರೀಕ್ಷೆಗೆ ಸಿದ್ಧ ಮಾಡಿಕೊಂಡಾಗ ನನಗೆ ಒಂದು ರೀತಿಯ ಕಳವಳ ಉಂಟಾದದ್ದು ಸಹಜವೇ ಸರಿ. ಕಲ್ಯಾಣಿಯ ಕೈ ಹಿಡಿಯಲು ನನಗೆ ಯೋಗ್ಯತೆ ಉಂಟೇ ಇಲ್ಲವೇ ಎಂದು ಅವರು ಹೇಗೆ ತೀರ್ಮಾನಿಸುತ್ತಾರೆ ಎಂಬುದೇ ನನಗೆ ಅರ್ಥವಾಗಿಲ್ಲ. ಆ ಬಗೆಯ ಎಕ್ಸ್‌ರೇ ಪ್ರಯೋಗ ನನಗೆ ಅಂದೇ ಮೊದಲು. ಅಲ್ಲದೆ ಆಗಲೇ ಅವಳನ್ನು ವರಿಸಲು ನಿಶ್ಚಯಿಸಿದ್ದ ನನಗೆ ಎಲ್ಲಿ ಕಲ್ಯಾಣಿ ಕೈ ಜಾರಿ ಬಿದ್ದು, ಬಿಡುವಳೋ ಎಂಬ ಹೆದರಿಕೆ ಅಂಕುರಿಸಿತು.

ನನ್ನ ಮುಖವೇ ನನಗೆ ಮೋಸಮಾಡಿಬಿಡಬಹುದೆಂದು ನಾನು ಭಯಪಟ್ಟೆ. ಸುಟಿಯಾಗಿ ಸುಂದರವಾಗಿ ಕಾಣಿಸಿಕೊಳ್ಳಬೇಕು ಎಂದು ಶ್ರಮಪಟ್ಟಾಗಲೇ ಹಾಳುಮುಖ ಸುರಟಿಕೊಂಡು ಸಪ್ಪೆ ಮುದ್ದೆಯ ಹಾಗಾಗುವುದು. ನಾವು ಮೂರು ಹೊತ್ತೂ ಹೊತ್ತುಕೊಂಡು ತಿರುಗಿದರೂ ಅವಕ್ಕೆ ಸ್ವಾಮಿ ಭಕ್ತಿಯೇ ಇಲ್ಲ. ಉದಾಹರಣೆ ಬೇಕಾದರೆ ಕೊಡುತ್ತೇನೆ. ಆಗಿನದಲ್ಲ. ಈಚಿನದು. ಫೋಟೋ ತೆಗೆಸಿಕೊಳ್ಳೋಣ ಅಂತ ಚಪಲ ಹುಟ್ಟಿತು. ಮೊನ್ನೆ! ರಾಮ, ಕೃಷ್ಣ, ಗೋವಿಂದ ಅಂತ ಅತ್ತಲಾಗಿನ ದಾರಿ ಹುಡುಕಬೇಕಾದ ವಯಸ್ಸು ಆದರೂ ನನ್ನ ಮರಿಮಕ್ಕಳಿಗೆ ನನ್ನ ಸ್ವಸ್ವರೂಪಾವಲೋಕನವೇ ಸಿಗದಲ್ಲಾ ಎಂಬ ಸಂಕಟ! ಗೋಡೆ ಮೇಲೆ ಮೊಳೆಗೆ ನೇತಾಡಬೇಕೆಂಬ ಬಯಕೆ! ಘಟ ಬಿದ್ದುಹೋದ ಕೂಡಲೇ ಚರಮ ವೃತ್ತಾಂತ, ವಿಶೇಷ ಸಂಚಿಕೆ ಮುಂತಾದುವುಗಳನ್ನು ಹೊರಡಿಸುವ ಸಂಪಾದಕರು ಮೃತರ ಫೋಟೋ ಪ್ರತಿ ಇದೆಯೇ ಅಂತ ನನ್ನ ಹಿರಿಯ ಮಗನನ್ನ ಕೇಳುವಾಗ ಅವನ ಬಾಯಲ್ಲಿ ಇಲ್ಲ ಅಂತ ಅನ್ನಿಸಬಾರದೆಂಬ ಆತುರ! ಸತ್ತ ಪ್ರಾಣಿ ಯಾರೂ ಅಂತ ಮಹಾಜನಗಳಿಗೆ ಮನಗಾಣಿಸೋಣವೆಂಬ ಮಹತ್ವಾಕಾಂಕ್ಷೆ.

ಆದ್ದರಿಂದ ನನ್ನ ಫೋಟೋ ಏನಾದರೂ ನನ್ನ ಮಕ್ಕಳಿಗೆ ಕೊಟ್ಟು ಹೋಗೋಣ ಎಂದು ಆಲೋಚಿಸಿದೆ! ಫೋಟೋ ತೆಗೆಯುವ ಆಸಾಮಿಗಳು ಬಹಳ ನಾಜೋಕು. ಅವರನ್ನು ನೋಡಿದ ಕೂಡಲೇ ಕಲಾವಿದರು ಎಂದು ಭಾಸವಾಗುತ್ತಿತ್ತು. ನೆತ್ತಿಯ ನಡುಭಾಗದಲ್ಲೇ ಬೈತಲೆ, ಎರಡು ಕಡೆಗೂ ಬಾಚಿ ಇಳಿಬಿದ್ದಿದ್ದ ಕರೀಕೂದಲು ಕಿವಿವರೆಗೂ ನೇತಾಡುತ್ತಿತ್ತು. ವಿನಯ, ಮೃದುನಗೆ, ಕುಡಿಮೀಸೆ, ಇತ್ಯಾದಿ ಸಾಮಗ್ರಿಗಳಿಂದ ಅವರು ನನ್ನ ಸುಲಿಗೆಗೆ ಸಿದ್ಧವಾಗಿ ನಿಂತಿದ್ದರು. ತಮ್ಮ ಕರ್ಮಾಗಾರಕ್ಕೆ ಅವರು ನನ್ನನ್ನು ಕರೆದೊಯ್ದರು. ಪೂರ್ಣ ದೀರ್ಘವೋ, ಅರ್ಧ ದೀರ್ಘವೋ

ಎದೆಯೋ, ಮೂತಿಯೋ, ಎಂದು ಕೇಳಿದರು. ನನಗೆ ಅರ್ಥವಾಗಿಲ್ಲ. "ಯಾವುದು ಅಗ್ಗ ? " ಅಂದ. ಅವರು ನಕ್ಕರು. "ಪೆಟ್ಟಿಗೆ ಆಕಾರದಲ್ಲಿ ಮುಖಮಾತ್ರ ತೆಗೆಸಿಕೊಳ್ಳಿ!" ಅಂದರು. 'ಹೂಂ' ದ. ಫೋಟೋಪೆಟ್ಟಿಗೆಯನ್ನು ಸರ್ರನೆ ತಿರುಗಿಸಿ,ಥರದೆಯನ್ನು ಹಿಡಿದೆಳೆದು, ಗಾಜಿನ ಸೂರೆಯನ್ನು ಸರಸರನೆ ಬದಲಾಯಿಸಿ, ಆಶುದೀಪಗಳನ್ನು ಆರಿಸಿ, ಹಾಕಿ, ನನ್ನನ್ನು ಕೂರುವಂತೆ ಸಂಜ್ಞೆಮಾಡಿದರು. ನನ್ನ ಭುಜವನ್ನಲ್ಲಾಡಿಸಿ ಬಲಕ್ಕೆತಿರುಗಿಸಿನರು. ಆ ಮೇಲೆ ಸ್ವಸ್ಥಾನಕ್ಕೆ ಹೋಗಿ ಕರೀ ಬುರುಕಿ ಹಾಕಿಕೊಂಡು ನನ್ನನ್ನು ಹೆದರಿಸಿದರು. ಅಸಮಾಧಾನದಿಂದ ಮುಂದಕ್ಕೆ ಬಂದು, 'ಎಡಕ್ಕೆ ಬನ್ನಿ' ಆಂತ ಆಜ್ಞಾಪಿಸಿದರು. ಬಲಗಣ್ಣ ಸೊಟ್ಟಿಸಿ ನನ್ನನ್ನು ದುರುದುರನೆ ನೋಡಿದರು. ರಟ್ಟೆ ಹಿಡಿದು ಎಳೆದರು. ತಲೆಯನ್ನು ಬಲವಂತದಿಂದ ತಗ್ಗಿಸಿದರು. ಕತ್ತಿನ ಹಿಂಭಾಗವನ್ನು ಹಿಡಿದೆಬ್ಬಿಸಿದರು. ಅಲ್ಲಿ ಏನೋ 'ಗಳಕ್' ಅಂತ ಸದ್ದಾಯಿತು. ಈಗ ಪರವಾಯಿಲ್ಲ. ಅಂತ ತಲೆದೂಗಿದರು. ಆಮೇಲೆ ಓಡಿ ಹೋಗಿ ಬುರುಕಿ ಹಾಕಿಕೊಂಡರು. ಅವರಿಗೆ ಸಮಾಧಾನವಾಯಿತು. ಸಾಕೆನಿಸಿತು. ಮತ್ತೆ ನನ್ನ ತಂಟೆಗೆ ಬರಲಿಲ್ಲ. ದೂರದಿಂದಲೇ ನನ್ನ ಮುಖಭಾವವನ್ನು ಬದಲಾಯಿಸಲು ಯತ್ನಿಸಿದರು. ಕನ್ನಡಕ ತೆಗೆಸಿದರು. ಸಾದನ್ನ ಅಳಿಸಿದರು. ಆಮೇಲೆ ತಾವೇ ಹಾಕುವುದಾಗಿ ಭರವಸೆ ಇತ್ತರು. ಅಂಗಿಯಲ್ಲಿ ನಾನು ಸಿಕ್ಕಿಸಿದ್ದ ಕರ್ಚೀಫನ್ನು ಒಳಕ್ಕೆ ತಳ್ಳಿಸಿದರು. ಉಸಿರೆಳೆದುಕೊಳ್ಳಿ ಎಂದರು. "ಅಷ್ಟು ಬೇಡಿ" ಅಂದರು "ಕೊಂಚ ನಗಿರಿ" ಅಂದರು. ಇಷ್ಟೆಲ್ಲ ಅನುಭವಿಸಿದ ಮೇಲೆ ನಗು ಹೇಗೆ ಬರುತ್ತೆ ? ಆದರೂ, ಪತ್ರಿಕೆಗಳಲ್ಲಿ ಬರಬೇಕಾದ ನನ್ನ ಚರಮ ಚಿತ್ರವನ್ನು ನೆನೆದು ನಾನು ಹಲ್ಲು ಸಾಲನ್ನು ಅರ್ಧ ಹೊರಗಾಣಿಸಿದೆ. ಆಗ ಅವರ ಮುಖದಲ್ಲಿ ಉಂಟಾದ ಭಯದ ಚಿಹ್ನೆಯನ್ನು ಕಂಡು ನಾನೇ ಸರಕ್ಕನೆ ಹಲ್ಲುಸಾಲನ್ನು ತುಟಿಗಳಿಂದ ಮುಚ್ಚಿದೆ. "ಸರಿ! ಸರಿ! ಹಾಗೆಯೇ ಇರಿ ಕೊಂಚ" ಅಂತಹೇಳಿ, ಅವರು ಕ್ಲಕ್ಕೆನಿಸಿ ನನಗೆ ವಂದನಾರ್ಪಣೆ ಮಾಡಿದರು. "ಬದುಕಿದೆಯಾ ಬಡಜೀವವೇ" ಅಂತ ನಾನೂ ಬೀದಿಗೆ ಬಂದೆ. ಒಂದುವಾರದ ಮೇಲೆ, ಮೂರು ಪ್ರತಿಗಳು ಮನೆಗೆ ಬಂದವು. ನನ್ನ ಹಿರಿಯ ಮಗನೇ ಬಿಚ್ಚಿದ. ನಮ್ಮ ಮನೆ ಹುಡುಗರು ಒಳ್ಳೇ ಮರ್ಯಾದಸ್ಥರು; ಸುಶಿಕ್ಷಿತರಾದ ಬಾಲಕ ಬಾಲಿಕೆಯರು. ಆದರೂ, ಒಬ್ಬೊಬ್ಬರೂ ಒಂದೊಂದು ಮೂಲೆಗೆ ಹೋಗಿ 'ಹಿಹಿಹಿ' ಅಂತ ಹಾಸ್ಯಮಾಡಲು ಪ್ರಾರಂಭಿಸಿಬಿಟ್ಟರು. ಈಗ ಆ ಮೂರು ಪ್ರತಿಗಳಲ್ಲಿ ಒಂದನ್ನ ಗೆದ್ದಲು ನುಂಗಿದೆ. ಒಂದರಿಂದ ನನ್ನ ಮಗಳು ಒಲೆ ಬೀಸುತ್ತಿದಾಳೆ. ಒಂದನ್ನ ಮಡಿಸಿ ಮೇಜಿನ ಕಾಲು ಅಲ್ಲಾಡದಹಾಗೆ ಅದರ ಕೆಳಗಿಟ್ಟಿದೇವೆ.

"ಯಾಕಯ್ಯ ಹೀಗಾಯಿತು ?" ಅಂತ ಫೋಟೋದವರನ್ನೇ ಕೇಳಿದೆ, ಧೈರ್ಯವಾಗಿ ಆ ಪ್ರಶ್ನೆಗೆ ಅವರು ಸರಿಯಾದ ಉತ್ತರ ಕೊಡಲಿಲ್ಲ. ನನ್ನ ವದನಾರ

ವಿಂದವನ್ನು ವಿವರಣೆ ಮಾಡಿದರು. ಮಾನನಷ್ಟಕ್ಕೆ ಕೇಸು ಹಾಕೋಣವೋ ಎಂದು ನೋಡಿದೆ. ನನ್ನ ಮುಖವೇ ಎಕ್ಸಿಬಿಟ್ ಎ ಆಗುತ್ತೆ ಅಂತ ಯೋಚನೆ ಮಾಡಿ ಸುಮ್ಮನಾದೆ. ಅಂತೂ, ಯಾಕೆ ಇಷ್ಟು ಲಂಬಿಸಿದೆ ಅಂದರೆ, ಬೇಕು ಅಂದಾಗ ಈ ಹಾಳು ಮೂತಿ ಕೈಕೊಟ್ಟು ಬಿಡುತ್ತದೆ ಅಂತ ತಮಗೆ ತಿಳಿಸುವುದಕ್ಕೆ.

ಆ ದಿನ ನಾನು ಎಷ್ಟೋ ಸಲ ಕನ್ನಡಿ ಮುಂದೆ ನಿಂತು ಮುಖ ಸರಿಮಾಡಿಕೊಂಡೆ, ಮದುವೆ, ವಧು, ರಂಗಣ್ಣನ ಮಗಳು, ಕಲ್ಯಾಣಿ ಎಂಬ ಮಾತುಗಳು, ಕಿವಿಗೆ ಬಿದ್ದಾಗಲೆಲ್ಲಾ ನನ್ನ ಮುಖ ಕೆಂಪೇರುತ್ತಿತ್ತು. ನಾಚಿಕೆ ಬೇರೆ ಸಲ ಸಲಕ್ಕೂ ಮುಖದ ಮೇಲೆ ಹಾದು ಹೋಗುತ್ತಿತ್ತು. ರಂಗಣ್ಣನವರ ಕಡೆಯವರು ಆಗಾಗ ನನ್ನ ಕಡೆ ನೋಡಿದಾಗಲಂತೂ ತಲೆ ತಗ್ಗಿಸದೆ ಗತ್ಯಂತರವಿರಲಿಲ್ಲ.

ರಂಗಣ್ಣನವರ ಮಗಳು ಬಿಟ್ಟ ಕಣ್ಣು ಬಿಟ್ಟ ಹಾಗೆ ನನ್ನನ್ನೇ ಪರೀಕ್ಷಿಸುತ್ತಿದ್ದಳು. ಅವರ ಭಾವಮೈದ ನನ್ನೆದುರು ಕುಳಿತು ಕಾಲೇಜು, ಮೇಷ್ಟ್ರುಗಳು, ಪಾಠ ಪ್ರವಚನ, ಟೆನ್ನೀಸು ಇತ್ಯಾದಿ ವಿಷಯಗಳನ್ನು ಕೇಳುತ್ತಿದ್ದರು. ನನ್ನ ಭಾಷಾ ಪರಿಜ್ಞಾನವನ್ನು ಅಳೆಯಲೆಂದು ಅವರು ಇಂಗ್ಲೀಷಿನಲ್ಲೇ ಸಂಭಾಷಿಸಿದರು. ಕಲ್ಯಾಣಿಯನ್ನು ನನಗೆ ಕೊಡಬಹುದೆಂದು ಅವರಿಗೆ ಅನ್ನಿಸಿತೆಂದು ನನಗೆ ತೋರಿತು. ಪ್ರಾಯಶಃ ನನ್ನ ಮುಖದಲ್ಲಿ ಅಷ್ಟು ಪೆದ್ದುತನಂತಿಕೆ ಆಗ ಇರಲಿಲ್ಲವೋ ಏನೋ?

ಕಾಲುಗಂಟೆಯಾದ ಮೇಲೆ, ನನ್ನ ತಂದೆಯವರೂ ರಂಗಣ್ಣನವರೂ ಹಜಾರದಲ್ಲಿ ಕುಳಿತು ಗುಸ ಗುಸ ಮಾತಾಡಿದರು. ಬೆಳ್ಳಿ ಪಾತ್ರೆಗಳ ಪಟ್ಟಿ ಮಾಡಿದರು. ರಾತ್ರಿ ಏಳು ಗಂಟೆಗೆ ಬಂದವರೆಲ್ಲಾ ಹೊರಟರು. ಆ ಮೇಲೆ ಎದುರು ಮನೆ ಹೆಂಗಸರಿಗೂ ಪಕ್ಕದ ಮನೆ ಹೆಂಗಸರಿಗೂ ನನ್ನ ತಾಯಿ ಅವರಂದದ್ದನ್ನೂ, ಇವರಂದದ್ದನ್ನೂ ವರದಿ ಒಪ್ಪಿಸಿದರು.

ಜಾತಕಗಳು ಸರಿಹೋದುದೇ ತಡ. ಕಲ್ಯಾಣಿಯನ್ನು ವರಿಸಬಹುದೆಂದು ನನಗೆ ದೃಢವಾಯಿತು.

[ಎಸ್. ವೀ. ವೀ. ಕೃತಂ]

(ಮುಂದಿನ ತಿಂಗಳು "ದುಡ್ಡೇನು ಮಹಾ!")

—ನಾ. ಕ.

ಕಾಲು ಕೆರೆದು ಜಗಳ ಕಾಯುವುದಕ್ಕೆ ಹತ್ತು ಕಾರಣಗಳಿವೆಯಂತೆ.

—ಮುಖ್ಯವಾದುದು ಅವುಗಳಲ್ಲಿ-ಎದುರಾಳಿಗಿಂತ ನಾವು ಶಕ್ತಿಯುತರಾಗಿರುವುದು—

* * *

ವಿಜಯ ದಶಮಿಯ ದಿನ ಓಟ್ಲರನೂ ದಂಡಯಾತ್ರೆ ಹೊರಟನಂತೆ.

—ಫಲ—ದಂಡ.

ನಮ್ಮ ಮಕ್ಕಳಿಗೆ ನಾವೇ ಮೇಷ್ಟ್ರಾದರೆ ?

ನವರಾತ್ರಿ ಹಬ್ಬಕ್ಕೆ ಮಕ್ಕಳಿಗೆ ಬೊಂಬೆ ಸಾಮಾನು ತರೋಣ ಅಂತ ಪೇಟೆಗೆ ಹೋಗಿ ಶಾಮಿಗೆ ಸಿಕ್ಕಿಬಿದ್ದೆ. ನನ್ನ ಕಂಕುಳಲ್ಲಿದ್ದ ರೊಟ್ಟಿನ ಪೆಟ್ಟಿಗೆಯಲ್ಲಿ toy car ಇದೆ ಎಂದು ತಿಳಿದು ಅವನು ನಸುನಗುತ್ತಾ ನುಡಿದ:-"ಸಂತೋಷ,ಸುಬ್ರಾಮು ಸಂತೋಷ. ಹಬ್ಬದ ಜತೆಗೆ ವಿದ್ಯಾಭ್ಯಾಸಾನೂ ಸಾಗಿಸಬಹುದು. ಈಗ ನಡೆಯು ತ್ತಿರುವ ಕ್ರೂರ ಕೃತ್ಯಗಳನ್ನು ನೋಡಿ ನನ್ನ ಹೊಟ್ಟೆಯಲ್ಲಿ ಉರಿಹಾಕಿದ ಹಾಗೆ ಆಗು ತ್ತಿದೆ. ನಮಗೆ ಬುದ್ಧಿ ಸಾಲದು. ಅಂದರೆ ನಮ್ಮ ಮಕ್ಕಳಾದರೂ ಸುಖವಾಗಿ ಬಾಳಲಿ. ಇದಕ್ಕೆ ಒಂದೇ ಒಂದು ಉಪಾಯ, ಸುಬ್ರಾಮು. ಅದೇನು ಅಂತೀ ಯೊ : ದೇವರು ವರ ಕೊಟ್ಟಹಾಗೆ ನಮಗೆ ದಕ್ಕಿರುವ ತಿಳಿವು ಮತ್ತು ಯಂತ್ರೋಪ ಕರಣಗಳು ಸಾರ್ವತ್ರಿಕ ಖೂನಿಗಲ್ಲ ಅಂತ ಎಲ್ಲರಿಗೂ ಮನವರಿಕೆ ಆಗಬೇಕು. ಟೆಕ್ನಿ ಕಲ್ ಟ್ರೈನಿಂಗ್ ಇಂದಲೇ ಇದು ಸಾಧ್ಯ, ನಮ್ಮ ಮಕ್ಕಳಿಗೆ ಇದನ್ನ ಕೊಡಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುವುದಿಲ್ಲ. ಇದರಿಂದಲೇ ಪ್ರಪಂಚಕ್ಕೆ ಮುಕ್ತಿ. ನೀನೂ ಪ್ರಾರಂಭಿಸು, ನಾನೂ ಮಾಡ್ತೀನಿ. ನಮ್ಮನ್ನ ನೋಡಿ ಇತರರೂ ಪ್ರಾರಂ ಭಿಸಲಿ. ನೋಡುವ, ರೋಂ ವಾಸ್ ನಾಟ್ ಬಿಲ್ಟ್ ಇನ್ ಎ ಡೆ. ತಿಳೀತೆ ? ಕಲಿಯು ಗದ ರಾಮರಾಜ್ಯ ಕಟ್ಟೋಕ್ಕೆ ನೀನು ಸಹಾಯಮಾಡಿದಹಾಗಾಗುತ್ತೆ. ಹೇಗಿದ್ದರೂ ನಿನ್ನಲ್ಲಿ ಈಗ ಟಾಯ್ ಕಾರ್ ಇದೆ. ನಿನ್ನ ಮಗನಿಗೆ ಇದರ ವಿಚಾರ ತಿಳಿಸಿ, ಇದರ ಉಪಯೋಗ ಎಷ್ಟು ಅಂತ ತೋರಿಸು. ಆಸಕ್ತಿ ಹುಟ್ಟಿಸು. ಅದರ ಪರಿಣಾಮ ನಿನಗೆ ಕಾಣುತ್ತೆ."

ಶಾಮಿ ಹೇಳಿದ್ದು ನಿಜ ಅನ್ನಿಸಿತು. ಶುಭಸ್ಯ ಶೀಘ್ರಂ; ಇವತ್ತೇ ವಿದ್ಯಾಭ್ಯಾಸ ಆರಂಭಿಸೋಣ ಅಂದುಕೊಂಡೆ.

*   *   *

ಮನೆಗೆ ಹೋಗಿ, "ಬಾಗಿಲು." ಅಂದದ್ದೆ ತಡ, ರಾಮು, ಪ್ರಭಾ ಇಬ್ಬರೂ "ಅಣ್ಣ ಬಂದ" ಅಂತ ಕೂಗಿಕೊಂಡು ಬಂದರು. ಇದು ಶುಭಸೂಚಕವೆಂದು ಕೊಂಡು, "ಬನ್ರೊ, ತವಾಷೆ ತಂದಿದ್ದೀನಿ." ಎಂದು ಹಾಲಿನ ಜಂಖಾನದ ಮೇಲೆ

ಕೂತೆ. ರಾಮು, ಪ್ರಭಾ ಇಬ್ಬರೂ ಎದುರಿಗೆ ಕೂತರು. "ಇದು ಹೋಟೆಲ್‌ದೇ ನಣ್ಣ?" ಎಂದು ರಾಮು ಕೇಳಿದ. ನಾನು ಉತ್ತರ ಕೊಟ್ಟಾಗ ಆ ಮಕ್ಕಳ ಮುಖ ನೋಡಿ ನನ್ನ ಮೋರೆಗೆ ತಣ್ಣೀರೆರಚಿದ ಹಾಗಾದರೂ, ಧೈರ್ಯವಾಗಿ ನನ್ನ ಸತ್ಕಾರ್ಯವ ನ್ನಾರಂಭಿಸದೆ.

"ಇದು ಮೋಟಾರು; ರಸ್ತೇಲಿ ಹೋಗೋ ಮೋಟಾರಿನ ಹಾಗೇ. ಈ ಕೀಲು ತಿರುಗಿಸಿದರೆ ಮುಂದೆ ಹೋಗುತ್ತೆ."

ರಾಮು:-ಯಾರಿಗಣ್ಣ ಇದು; ನಂಗೋ, ಇವಳಿಗೊ ?"

ಪ್ರಭಾ:-ಹುಂ. ನಂಗೆ. ಅಲ್ವೇನಣ್ಣ ?

ನಾನು:- ನೀನೇನು, ಇವಳೇನು ? ಇಬ್ಬರೂ ಒಂದೆ. ಇದು ಇಬ್ಬರಿಗೂ ಸೇರಿದ್ದು. ಇರಲಿ ಇಲ್ಲಿ ನೋಡಿ. ಇದು ಹಾರನ್—ನಮ್ಮ ಬಾಯಿನ ಹಾಗೆ; ಇದು ದೀಪ--ಕಣ್ಣಿನತರಹ. ಎಲ್ಲಿಗೆ ಹೊರಟೆ, ಪ್ರಭ ?

ಪ್ರಭಾ ಮಾತಾಡದೆ ಓಡಿದಳು. "ನೀನೇ ಕೇಳೊ, ರಾಮು." ಆದರೆ ರಾಮು ಪರೋಕ್ಷದಲ್ಲಿ ನಡೆಯುತ್ತಿರುವುದನ್ನೂ ಕಾಣುವವನಂತೆ, ಪ್ರಭಾ ಹೋದ ಕಡೆಯೆ ನೋಡುತ್ತಿದ್ದು, ತಾನೂ ಓಡಿದ. ಆಮೇಲೆ ಅವಳು ತನ್ನ ಗಿಳಿ ಇದ್ದ ಪಂಜರವನ್ನೂ ರಾಮು ತನ್ನ ನಾಯನ್ನೂ ತೆಗೆದುಕೊಂಡು ಬಂದು ಕೂತರು.

ಪ್ರಭ:-ಹೇಳಣ್ಣ.

ನಾನು:-ಈ ಮೋಟಾರು ಕೀಲು ಕೊಟ್ಟರೆ ಮುಂದಕ್ಕೆ ಹೋಗುತ್ತೆ.

ರಾಮು:-ಅಯ್ಯೋ ! ಕೀಲುಕೊಡಬೇಕು !

ನಾನು:-ಹೌದೂ. ಇವೆಲ್ಲ ಅಷ್ಟೆ. ದೊಡ್ಡದಕ್ಕೆ ಪೆಟ್ರೋಲ್ ಹಾಕಬೇಕು. ಇದಕ್ಕೆ ಕೀಲು ಕೊಡಬೇಕು.

ಪ್ರಭಾ:-ಇದು ಹಾರುತ್ತೇನಣ್ಣ ?

ನಾನು:-ಇಲ್ಲಮ್ಮ, ಆದರೆ—

ಪ್ರಭಾ:-ನನ್ನಗಿಳಿ ಹಾರುತ್ತೆ.

ರಾಮು:-ಈ ಮೋಟಾರು ಹಿಂದಕ್ಕೆ ಹೋಗುತ್ತೊ?

ನಾನು:-ಇದು ಹೋಗುಲ್ಲ. ಆದರೆ—

ರಾಮು:-ಜಾನಿ ಬೇಕಾದರೆ ಹಿಂದಕ್ಕೆ ಹೋಗುತ್ತೆ. ಈ ಮೋಟಾರೂ ಹೋಗುಲ್ಲ, ಈ ಗಿಳೀನು ಹೋಗುಲ್ಲ.

ನಾನು:-ಇರಲಿ. ಸ್ವಲ್ಪ ತಡೀರಿ. ಏಕೆ ಗೊತ್ತೆ ಮೋಟಾರು ? ಅದರಲ್ಲಿ ಕೂತು ಕೊಂಡು ಎಲ್ಲಿಬೇಕಾದರೂ ಹೋಗಬಹುದು.

ರಾಮು:-ಇದು ಇಷ್ಟು ಪುಟ್ಟದಾಗಿದೆ !

ನಾನು:-ಇದರಲ್ಲಿ ಅಲ್ಲಪ್ಪೊ, ದಡ್ಡ ; ನಿಜವಾದ ಕಾರಿನಲ್ಲಿ.

ರಾಮು:-ಓ !

ನಾನು:-ಅದೊಂದು ದೊಡ್ಡ ಉಪಕಾರ. ಕಾರು ಎಲ್ಲಿಬೇಕಾದರೂ ಹೋಗುತ್ತೆ.

ಪ್ರಭಾ:-ನನ್ನ ಗಿಳಿನೂ ಹೋಗುತ್ತೆ.

ರಾಮು:-ಹೂಂ ಹೊರಟು ಹೋಗುತ್ತೆ. ಹೋಗುತ್ತೆ; ಬರುಲ್ಲ.

ನಾನು:-ಇದರಲ್ಲಿ ಕೂತುಕೊ ಬಹುದು, ಪ್ರಯಾಣ ಮಾಡಬಹುದು; ಸವಾರಿ ಮಾಡಬಹುದು. ತಿಳೀತೆ ? ಆ? ಹೂ. ಇದು ಹಾರನ್. ಇದರ ಸದ್ದಿಗೆ ಹೆದರಿ ಜನ ದಾರಿ ಬಿಡುತ್ತಾರೆ.

ರಾಮು:-ಜಾನಿಗೂ ಜನ ಹೆದರುತ್ತಾರೆ.

ನಾನು:-ಇದು ಬ್ರೇಕ್, ಇದನ್ನ ಹೀಗೆ ಹಾಕಿ ಹಾಕಿದರೆ, ಕಾರ್ ಹತ್ತೋಟಿಗೆ ಬರುತ್ತೆ.

ರಾಮು:-ಜಾನೀನು ಹತ್ತೋಟಿಗೆ ತರಬಹುದು.

ಪ್ರಭಾ:-ಗಿಳಿನು ಹಾಗೆ.

ರಾಮು: -ಪಾಪ. ಎಲ್ಲಿ ಆದನ್ನ ಹೊರಕ್ಕೆ ಬಿಟ್ಟು, ಕಮ್ ಆನ್, ಕಮ್ ಆನ್, ಅನ್ನು; ನೋಡೋಣ.

ಪ್ರಭಾ:-ಎಲ್ಲಿ, ನಿನ್ನ ನಾಯಿ ರಾಮ ರಾಮ ಅನ್ನಲಿ.

ನಾನು:-ಇಲ್ಲಿ ಕೇಳೊ.

ರಾಮು:-ಆ ಗೂಬೆಗಳಿಗೆ ಛೂ ಅನ್ನು.

ಪ್ರಭಾ:-ಈ ಗಿಳಿಗೆ ನಮ್ಮ ಮಾತು ತಿಳಿಯುತ್ತೆ. ಈ ನಾಯಿಗೆ ತಿಳಿಬೇಕಾದರೆ ನಾಯಿನ ಹಾಗೆ ಗುರ್ ಗುರ್ ಅನ್ನಬೇಕು.

ನಾನು:-ಲೋ, ರಾಮು, ಸುಮ್ಮನಿರೋ ಮೋಟಾರಿನಲ್ಲಿ ಲಾಲ್‌ಬಾಗಿಗೆ ಹೋಗಬಹುದು.

ರಾಮು:-ಜಾನೀನು ವಾಕಿಂಗ್ ಕರೆದುಕೊಂಡು ಹೋಗಬಹುದು.

ಪ್ರಭಾ:-ಗಿಳೀನೂ ಕರೆದುಕೊಂಡು ಹೋಗಬಹುದು.

ರಾಮು;-ಹೂ, ಹೇಗೊ? ಎಲ್ಲಿ, ಅದರ ಕುತ್ತಿಗೆಗೆ ಚೈನುಹಾಕಿ ರಸ್ತೇಲಿ ನಡೆಸು ನೋಡ್ತೀನಿ.

ಪ್ರಭಾ:-ಆಗಲಿ, ನೀನೂ ಜಾನೀನೆ ಹೋಗಿ; ನಿನಗೂ ಅದಕ್ಕೂ ಜತೆ ಸರಿಯಾಗಿದೆ.

—ಬೆ. ಚಂ.

ತಾ ಟಿ ನು ಂ ಗು

ಶುಕ್ಲಪಕ್ಷ ಚತುರ್ದಶಿ. ಹಾಲು ಚೆಲ್ಲಿದ ಹಾಗೆ ಬೆಳದಿಂಗಳು. ರಾತ್ರಿ ಒಂಬತ್ತು ಗಂಟೆಯ ಸಮಯ. ಪುಷ್ಕಳನಾಗಿ ಊಟಮಾಡಿ ಎಲೆಅಡಿಕೆ ಹಾಕಿಕೊಳ್ಳಲು ಮನೆಯ ಅಂಗಳದಲ್ಲಿ ಕುಳಿತಿದ್ದೆವು. ಹಳೆಯ ಸ್ನೇಹಿತ ರಾಮು ಊರಿಗೆ ಬಂದಿದ್ದುದರಿಂದ ಅಚ್ಚುಕಟ್ಟಾದ ಊಟ. ಸ್ನೇಹಿತರಿಬ್ಬರನ್ನು ಕರೆದಿದ್ದೆ. ರಾಮುವಿನ ಜತೆಯಲ್ಲಿ ಬಂದಿದ್ದ ದೇವೇಂದ್ರಸಿಂಹನೂ ಊಟಮಾಡಿ ನಮ್ಮೊಡನೆ ಕುಳಿತಿದ್ದ. ಮಾತೂ ಸ್ವಾರಸ್ಯವಾಗಿತ್ತು. ಎಲೆಡಿಕೆಯೂ ಗರಮಾಗಿತ್ತು, ಗರಮಾಗಿಸುತ್ತಿತ್ತು.

ರಸ್ತೆಯಲ್ಲಿ ಒಬ್ಬನು "ತಾಟಿನುಂಗು" "ತಾ ಟಿ ನು ಂ ಗು" ಎ ಂ ದು ಕೂಗಿಕೊಂಡು ಬಂದನು. ರಾಮುವಿಗೆ ಕಣಿವೆಕೆಳಗಿನ ಸಂಬಂಧವಾದಾಗಿನಿಂದ ತಾಟಿನುಂಗಿನ ಮೇಲೆ ಮೋಹ. 'ತಾಟಿನುಂಗು' ಬಾ ಇಲ್ಲಿ—ಒಂದಾರು ನುಂಗುತಾ ಇಲ್ಲಿ. ಎಂದು ಪ್ರಾಸ ಬದ್ಧವಾಗಿ ವ್ಯಾಪಾರ ಮಾಡಿದ. ಎಲ್ಲರಿಗೂ ಒಂದೊಂದು ನುಂಗು ತಿನ್ನಲಿಕ್ಕೆ ನುಂಗಲಿಕ್ಕೆ ಕೊಟ್ಟ. ಅವರವರ ನುಂಗನ್ನು ತಿನ್ನುವ ಮೊದಲು ಹದಮಾಡುತ್ತಿದ್ದಾಗ ದೇವೇಂದ್ರಸಿಂಹನಂದನು.

ನೋಡ್ರಿ ಈ ತಾಟಿನುಂಗಿನ ರಚನೆಯು ಸೇತುವೆಗಳನ್ನು ಕಟ್ಟಿವಂತೆ, ಕಮಾನು ಹಾಕಿದಂತೆ ಇದರ ಸುತ್ತು ಶರೀರವು ಕಟ್ಟಲ್ಪಟ್ಟಿದೆ. ಒಳಗಡೆ ಜಾರುವಂತಹ ನುಂಗುವಸ್ತುವೂ ಇದರ ಆವರಣ ಶಕ್ತಿಯಿಂದಲೇ ನಿಂತಿದೆ. ಈ ಶರೀರವು ಇರುವ ತನಕ ಏನೇ ಏಟು ಬಿದ್ದರೂ ನುಂಗು ಹೊರಬೀಳುವುದಿಲ್ಲ. ಆಕಾಶಕ್ಕೆಎಸೆದರೂ ಅಂಚಿನ ಮೇಲೆ ಬಿದ್ದರೂ ನುಂಗು ಹೊರಗೆ ಬೀಳುವುದಿಲ್ಲ. ಎಂದನು.

ನಮಗೆಲ್ಲಾ ಅಪನಂಬಿಕೆ. ಅಪನಂಬಿಕೆಯು ಮುಖದಲ್ಲಿ ಚೆನ್ನಾಗಿಯೇ ಕಾಣಿಸಿರಬೇಕು. ಅದಕ್ಕಾಗಿಯೇ ಅವನು ತಿರುಗಿ, ನಾನು ಬೇಕಾದರೆ ಎಸೆದು ತೋರಿಸುತ್ತೇನೆ. ಇಲ್ಲಿ ನೆಲವೂ ಗಟ್ಟಿಯಾಗಿದೆ, ಅದು ಬಿದ್ದ ಕೂಡಲೆ ನುಂಗು ಹೊರಗಾದರೆ, ನೀವೆಲ್ಲರೂ ಒಂದೊಂದು ಒದೆ ಕೊಡಿ ನನಗೆ, ಅಲ್ಲದೆ ಒಬ್ಬೊಬ್ಬರಿಗೂ ನಾನು ಒಂದು ರೂಪಾಯಿ ದಂಡ ಕೊಡುತ್ತೇನೆ. ಹಾಗಲ್ಲದೆ ನಾನು ಹೇಳಿದ್ದು ದಿಟವಾದರೆ ನೀವೊಬ್ಬೊಬ್ಬರೂ ಎರಡೆರಡು ರೂಪಾಯಿ ಕೊಡಬೇಕು. ಎಂದು ಪಂಥ ಹಾಕಿದನು.

ಕೂತಿದ್ದ ಕಡೆ ಒಂದು ರೂಪಾಯಿ ಸಿಕ್ಕಿದರೆ ಏಕೆ ಬೇಡ ಎನ್ನುವುದು, ಎಂದು ಒಬ್ಬೊಬ್ಬರೂ ಈ ಪಂಥಕ್ಕೆ ಒಪ್ಪಿಕೊಂಡೆವು. ಸರಿ ಅವನ ಚಮತ್ಕಾರ್ಯವೂ ಶುರುವಾಯಿತು. ನಾವೆಲ್ಲರೂ ಒಂದು

ಕಡೆಗೆ ಸರಿದು ನಿಂತೆವು. ದೇವೇಂದ್ರ ಸಿಂಹನು ಒಂದು ತಾಟನುಂಗನ್ನು, ತಕ್ಕ ಮಟ್ಟಿಗೆ ಬಲಿತುದನ್ನೇ ತೆಗೆದುಕೊಂಡನು ರಣಶೂರನಂತೆ ಕಾಲು ಹಾಕಿ ನಿಂತನು. ಒಂದೆರಡು ಬಾರಿ ಕೈಯನ್ನಾಡಿಸಿ ನುಂಗನ್ನೆಸೆದನು. ಗುಣಕ್ಕೆ ಮತ್ಸರವುಂಟೆ! ಜೋರಾಗಿಯೇ ಎಸೆದನ್ನೆನಬೇಕು. ಇದೇ ಚಾಕಚಕ್ಯವನ್ನು ಕ್ರಿಕೆಟ್ ಚಂಡಿನ ಮೇಲೆ ಆವನು ತೋರುವ ಅಭ್ಯಾಸ ಮಾಡಿದ್ದಾದರೆ ಆತನು ಇಡೀ ಹಿಂದೂ ದೇಶದ ಪ್ರಸಿದ್ಧ ಕ್ರಿಕೆಟ್ ಆಟಗಾರನಾಗುವುದಲ್ಲದೇ ಯಾವುದಾದರೂ ಒಬ್ಬ ರಾಜಕುಮಾರನಿಗೆ ಒಡನಾಡಿಯಾಗಿ ಸುಖಜೀವನವನ್ನು ಕಳೆದುಕೊಳ್ಳಬಹುದಾಗಿತ್ತು. ಆದರೆ ಆ ಪುಣ್ಯವಿಲ್ಲದೆ, ಆಸಾಮರ್ಥ್ಯವನ್ನು ತಾಟನುಂಗಿನ ಮೇಲೆ ನಮ್ಮಗಳ ಸನ್ನಿಧಾನದಲ್ಲಿ ಎಸೆಯುವ ಯೋಗ ಮಾತ್ರ ಅವನಿಗೆ.

ನುಂಗೂ ಗಾಳಿಯಲ್ಲಿ ವೇಗವಾಗಿ ಹಾರಿತು. ನೇರನೆಯೇ ಹಾರಿತು. ಕಣ್ಣಿಗೆ ಕಾಣುವಷ್ಟು ದೂರವೂ ಹಾರಿತು. ಅನಂತರವೂ ಹಾರಿತು. ಎಲ್ಲಿ ಕೆಳಗೆ ಬೀಳುತ್ತದೋ, ಯಾರ ತಲೆಯ ಮೇಲೆ ಬೀಳುತ್ತದೋ ಎಂದು ಎಲ್ಲರೂ ತಲೆಬಾಗಿ ತಲೆಯನ್ನು ಕೈಯಿಂದ ಮುಚ್ಚಿಕೊಂಡರು. ಅದು ಮಾಂತ್ರಿಕ ತಾಟನುಂಗಿದ್ದಿರಬೇಕು. ದೇವೇಂದ್ರನ ಕಾಲುಬಳಿಯಲ್ಲೇ ಬಂದು ಬಿದ್ದಿತು. ನಾವೆಲ್ಲರೂ ಹೋಗಿ ನೋಡಿದೆವು. ಪರೀಕ್ಷಿಸಿದೆವು. ಈ ಹಾರಾಟದಿಂದ ಬೆಳದಿಂಗಳ ಪ್ರವಾಸದಿಂದ ನುಂಗಿಗೇ ಏನೂ ಅಪಘಾತವಾದಂತೆ ಕಾಣಲಿಲ್ಲ. ಅದರ ಶರೀರವು ಸರಿಯಾಗಿಯೇ ಇತ್ತು. ಅದರ ದೇಹವೇನೂ ಚರ್ಮದಾಚೆ ಬಂದಿರಲಿಲ್ಲ. ಜಂಭದಿಂದ ನೋಡುತ್ತಿದ್ದ ದೇವೇಂದ್ರ ಸಿಂಹನನ್ನು ನೋಡಿದೆವು. ಮಾತಾಡದೆ ಎರಡೆರಡು ರೂಪಾಯಿದಂಡ ತೆತ್ತೆವು. ಅಲ್ಲದೆ ತಾಟನುಂಗನ್ನೆಸೆದರೆ ಅದು ಯಾವ ಭೌತಿಕ ಶಾಸ್ತ್ರದ ರೀತಿಯಾಗಿ ಹಾರುತ್ತದೆ. ಯಾವ ಕಾರಣ ಸಂಸ್ಕಾರದಿಂದ, ದೇಹೋನ್ನತಿ ಮಾಡುತ್ತದೆ. ಬಿದ್ದರೂ, ಒಡೆಯುವುದಿಲ್ಲ ಇವೆಲ್ಲವನ್ನೂ ಶ್ರೀರಾಮನ್‌ರವರಿಗಿಂತ ರಸವತ್ತಾಗಿ ಹೇಳ ತೊಡಗಿದನು. ಈ ಉಪನ್ಯಾಸವನ್ನು ಬರಿದಾದ ಕಿಸೆಯ ನಾವುಗಳು ಕೇಳಲೇಬೇಕಾಯಿತು.

ಇದೆಲ್ಲವನ್ನೂ ಏಕೆ ಹೇಳಲಿಕ್ಕೆ ಬಂದೆ ಅಂದರೆ ನಿಮಗೂ ದೇವೇಂದ್ರ ಸಿಂಹನ ಪರಿಚಯವಾಗಬಹುದು. ನನಗಾದ ಪರಿಸಮಾಪ್ತಿಯನ್ನು ನಿಮ್ಮೆದುರಿಗೆ ಹೇಳಿದರೆ ನೀವು ಜಾಗರೂಕರಾಗಬಹುದು.

ಪರಿಸಮಾಪ್ತಿ ನನಗೆ ಹೀಗಾಯಿತು ನೋಡಿ. ದೇವೇಂದ್ರಸಿಂಹನು ಹೇಳಿದುದೆಲ್ಲಾ ದಿಟವೆಂದು ನಂಬಿದೆ. ಕೆಲವು ದಿನಗಳಾದ ಮೇಲೆ ನಾನೂ ಒಬ್ಬರ ಮನೆಯಲ್ಲಿ ಊಟಕ್ಕೆ ಹೋದೆನು. ಅಲ್ಲಿಯೂ ಊಟವಾದ ಮೇಲೆ ತಾಟನುಂಗು ಎಂಬ ಕೂಗು ಕೇಳಿತು. ನಾನು ಅವನನ್ನು ಕರೆದು ಕೊಂಡೆ. ಎಲ್ಲರೆದುರಿಗೆ ನನ್ನ ಚಾ[illegible]ಕನ್ನು ತೆಗೆದೆ, ಅಲ್ಲಿದ್ದವರೆಲ್ಲರೂ

ಚಕಿತರಾದರು, ಅವರಲ್ಲಿಯೂ ಪಂಥ ಹೂಡಿದೆ, ಎಲ್ಲರೂ ಒಪ್ಪಿದರು. ಸರಿ ಎಲ್ಲರೂ ದೂರ ಸರಿದು ನಿಂತರು. ಒಂದು ನುಂಗನ್ನು ಎಸೆದೆ. ಅದು ಹೊರಡುವುದರಲ್ಲೇ ಏನೋ ಅಚಾತುರ್ಯವಾದಂತೆ ತೋರಿತು. ಎಸೆಯುವ ಮೊದಲೇ ಕೈ ಜಾರುತ್ತಿದ್ದಂತೆ ಕಂಡಿತು. ಸ್ವಲ್ಪವೇ ದೂರ ವಕ್ರವಕ್ರವಾಗಿ ಹೋಗಿ ನೇರನೆ, ಮನೆ ಮಾಲೀಕನ ತಲೆಯ ಮೇಲೆ ಒಡೆದು ಬಿತ್ತು. ಆತನ ಶಾಪ ಸೌಖ್ಯವನ್ನನುಭವಿಸಿದೆ. ಅದು ತಪ್ಪಿಹೋಯಿತು ಇನ್ನೊಂದನ್ನೆಸೆದು ತೋರಿಸುತ್ತೇನೆ ಎಂದು ಇನ್ನೊಂದು ನುಂಗನ್ನು ತೆಗೆದು ಜೋರಾಗಿ ಎಸೆದೆ. ಅದು ನಿಜವಾಗಿಯೂ ಚೆನ್ನಾಗಿ ಹಾರಿತು. ಎಲ್ಲಿಗೆಯಾವ ದಿಕ್ಕಿನಲ್ಲಿ ಹೋಯಿತು ಎನ್ನುವ ವೇಳೆಗೆ ಅದು ನನ್ನ ಮೂಗಿನ ಮೇಲೆಯೇ ಬಂದ್ಬಿತ್ತು ಮೂಗನ್ನೆಲಾ ಕುಲಗೆಡಿಸಿತು. ಅದನ್ನೆಲ್ಲಾ ಒರೆಸಿಕೊಂಡು 'ಹಾಗೇ ಆಗಬೇಕು' ಸಾಮುಹಿಕ ಸಂಗಿತ ಕೇಳಿ, ಮುಟ್ಟಿದ್ದಕ್ಕೆ ಮೂರು ಬಾರಿ ಎಂದು ಇನ್ನೊಂದು ತೆಗೆದುಕೊಂಡು ಎಸೆದೆ. ಅದರ ಜತೆಗೆ ದೇವರಿಗೂ ಹರಿಸಿಕೊಂಡೆ. ಇದು ಸರಿಯಾಗಿ ಬಂದುಬಿದ್ದು ಒಡೆಯದೇ ಇದ್ದರೆ. ದೇವರಿಗೆ ಒಂದು ನೂರು ತೆಂಗಿನಕಾಯಿ ಒಡೆಯುವೆನೆಂದೆ. ಇದು ನುಂಗಿಗೆ ಹೇಗೊ ತಿಳಿದಿರಬೇಕು. ಆ ಪರಮಾತ್ಮನ ಪಾದಾರವಿಂದವನ್ನೇ ಸೇರಿ ಹೋಗಿರಬೇಕು. ತಿರುಗಿ ನಾವಿದ್ದ ಕಡೆಗೆ ಬರಲೇ ಇಲ್ಲ.

ಎಲ್ಲರಿಗೂ ದಂಡ ತೆತ್ತು ಒದೆತಿಂದು ಹಿಂತಿರುಗಿದೆ.

* * *

ಇಲ್ಲಿಗೆ ಮುಕ್ತಾಯವಾಗಬೇಕಾಗಿತ್ತು. ಆದರೆ ತಿರುಗಿ ದೇವೇಂದ್ರಸಿಂಹನ ಭೇಟಿ ದೊರಕಿತು. ಅವನನ್ನು ಕೇಳಿದೆ ಹೇಗಯ್ಯ ನೀನು ಇದನ್ನು ಸಾರ್ಥಕಗೊಳಿಸಿದೆ. ಹತ್ತು ರೂಪಾಯಿ ದಂಡ ಮಾಡುವಂತಾಯಿತು ನನಗೆ ಎಂದೆ. ಅಯ್ಯೋ ಮಂಕೇ-ಹಾಗಲ್ಲ ನುಂಗನ್ನು ಕೈಲಿ ಹಿಡಿಯುವಾಗ ನೀನು ಎಲ್ಲರನ್ನೂ ದೂರ ನಿಲ್ಲಿಸಬೇಕು ಎಸೆಯುವ ಜೋರನ್ನು ತೋರಿಸಬೇಕೆ ವಿನಹಾ ಎಸೆಯಬಾರದು ಮೆಲ್ಲಗೆ ಕೈ ಚಳಕಿನಿಂದ ಎಡಗೈಗೆ ಅದನ್ನು ವರ್ಗಾಯಿಸಿ ಬಲಗೈಯಲ್ಲಿ ಎಸೆಯಬೇಕು. ಎಡಗೈಯಿಂದ ಎಡಪಾದಕ್ಕೆ ನುಂಗನ್ನು ಬಿಡಬೇಕು. ಕಾಲಿಂದ ಅದೇ ನೆಲಕ್ಕೆ ಇಳಿಯುತ್ತದೆ. ಭೌತಿಕ ಶಾಸ್ತ್ರವಲ್ಲ ಪ್ರಾಮುಖ್ಯ ಮನಃ ಶಾಸ್ತ್ರ ಪ್ರಾಮುಖ್ಯ. ಮಿಕ್ಕವರ ಮನಸ್ಸನ್ನು ಮಾತಿನ ಕಡೆಗೆ ಎಳೆದು ನಡೆಸಬೇಕಾದ ಕಾರ್ಯಕ್ರಮ ಎಂದು ವಿಶದೀಕರಿಸಿದನು.

ಹಿಂದೂಸ್ಥಾನದಲ್ಲಿ ಅಲ್ಲಲ್ಲಿ ಬೆಂಕಿ ಅನಾಹುತಗಳಾಗುವುದಕ್ಕೂ ದೀಪಾವಳಿ ಆಚರಣೆಗೂ ಏನೂ ಸಂಬಂಧವಿಲ್ಲವೆಂದು ಖಂಡಿತವಾಗಿ ಗೊತ್ತಾಗಿದೆ.

ರಾಮಾಯಣದ ಪ್ರೆಸ್

★

ಸೀತಾದೇವಿ ಸುಖವಾಗಿದ್ದಾರೆ!

"ಉತ್ತಮ ಭೃತ್ಯ" ಬಿರುದು ಹನುಮಂತನಿಗೆ
"ಆಲಿಂಗನವೇ ಪ್ರತ್ಯುಪಕಾರ"

ಸ್ವಂ. ರಿ. ಬಾ.] ಕಿಷ್ಕಿಂಧೆ..........

ಹನುಮಂತನು ಲಂಕೆಯಿಂದ ಬರುವುದನ್ನೆ ಕಾಯುತ್ತಿದ್ದ ಕಪಿಸಮೂಹಕ್ಕೆ ಈ ದಿನವು ಬಹು ಮಹತ್ವದ ದಿನವಾಗಿದೆ. ಸಮುದ್ರತೀರದಲ್ಲಿ ಬಂಡೆಗಳ ಮೇಲೂ, ಮರಗಳ ನೆರಳಿನಲ್ಲೂ, ಕೊಂಬೆಗಳ ಮೇಲೂ, ಕುಳಿತು, ರಾಯಭಾರಿಯ ಬರವನ್ನೆ ಇದಿರು ನೋಡುತ್ತಿದ್ದ ಕಪಿಗಳು, ದೂರದಲ್ಲಿ ಕಪ್ಪಗೆ, ಸಣ್ಣಗೆ ಏನೊ ಹಾರಿ ಬರುತ್ತಿರುವುದನ್ನು ಕಂಡು ಉಕ್ಕುತ್ತಿರುವ ಹರ್ಷದಿಂದ ದಿಗಂತವನ್ನೇ ಭೇದಿಸುವಂತೆ ಸ್ವಾಗತವ ಕೂಗನ್ನು ಕೂಗಿದರು.

ಹನುನುಂತನು ಭೂಮಿಗೆ ಇಳಿದಾಗ ಅವನ ಮುಖದ ಮೇಲೆ ಜಯದ ನಗೆ ಇತ್ತು. ರಾಮ, ಸುಗ್ರೀವ, ಲಕ್ಷ್ಮಣರು ಹನುಮಂತನೊಡನೆ ಸ್ವಲ್ಪ ದೂರ ಹೋಗಿ, ಮಹತ್ವದ ವಿಷಯಗಳನ್ನು ಪರ್ಯಾಲೋಚಿಸಿದರು. ತರುವಾಯ ಈ ಪ್ರಕಟನೆ ಹೊರಬಿತ್ತು:—"ನಾವು ನಿಯಮಿಸಿದ ಕಾರ್ಯವನ್ನು ಹನುಮಂತನು ನಮಗೆ ತೃಪ್ತಿಯಾಗುವ ರೀತಿಯಲ್ಲಿ ನೆರವೇರಿಸಿದ್ದಾನೆ. ಅವನಿಗೆ ನಮ್ಮ ಕೃತಜ್ಞತೆಯನ್ನು ತೋರಿಸುವುದಕ್ಕೂ ಅವನು ಅನುಭವಿಸಿರುವ ಕಷ್ಟಗಳನ್ನು ತಿಳಿಪೂ, ಈಗ ಆಲಿಂಗನವೆ ಪ್ರತ್ಯುಪಕಾರವಾಗಿರುವುದರಿಂದ ಅವನಿಗೆ ಸರ್ವಸ್ವ ದಾನರೂಪವಾಗಿ ನಾವು ಈ ಆಲಿಂಗನವನ್ನು ದಯಪಾಲಿಸಿದ್ದೇವೆ." ಹೀಗೆಂದು ಹೇಳುತ್ತಾ ರಾಮನು ಹನುಮಂತನನ್ನು ಆಲಿಂಗಿಸಿದನು.

ಪುನಃ ವಾನರ ಸೇನೆಯನ್ನುದ್ದೇಶಿಸಿ ರಾಮನು ಹೀಗೆ ಹೇಳಿದನು.:—"ನಾವು

ಆಜ್ಞಾಪಿಸಿದ ಕಾರ್ಯವನ್ನು ಜಯಪ್ರದವಾಗಿ ಸಾಧಿಸಿ, ಜತೆಗೆ ಸ್ವಾಮಿ ಭಕ್ತಿಯಿಂದ ನಮಗೆ ಪ್ರಿಯವಾದ ಕಾರ್ಯವನ್ನು ತಾನೇ ಮಾಡಿರುವುದರಿಂದ, ನಾವು ನಮ್ಮ ಸಂತೋಷವನ್ನೂ ಮೆಚ್ಚಿಗೆಯನ್ನೂ ವ್ಯಕ್ತಪಡಿಸುವುದಕ್ಕಾಗಿ ನಮ್ಮ ಪ್ರಿಯ ಭೃತ್ಯನಾದ ಹನುಮಂತನಿಗೆ 'ಉತ್ತಮ ಭೃತ್ಯ'ನೆಂಬ ಬಿರುದನ್ನು ದಯಪಾಲಿಸಿದ್ದೇವೆ.

ರಾಯಭಾರದ ಗುಟ್ಟು

ವಾನರ ಮುಖ್ಯರ ಸಮ್ಮೇಳನದಲ್ಲಿ ರಾಮನ ವಿವರಣೆ

ಯುದ್ಧ ನಿಶ್ಚಯ

ಸ್ವಂ. ರಿ. ಬಾ.] ಕಿಷ್ಕಿಂಧೆ...........

ದಕ್ಷಿಣದಿಂದ ಬಂದ ಸುದ್ದಿಯ ಪ್ರಕಾರ ಇವತ್ತು ಮಧ್ಯಾಹ್ನ ರಾಮನು ಹನುಮಂತನ ರಾಯಭಾರದ ವಿಚಾರವಾಗಿ ವಾನರ ಮುಖ್ಯರ ಸಮ್ಮೇಳನವೊಂದರಲ್ಲಿ ಒಂದು ವಿವರಣೆ ಇತ್ತನು. ಹನುಮಂತನು ಲಂಕೆಗೆ ಹೋದದ್ದು ಸೀತಾನ್ವೇಷಣಕ್ಕಾಗೆಂದೂ, ಆತನು ಅಲ್ಲಿಂದ ತಂದಿರುವ ಸುದ್ದಿಯು ಧೈರ್ಯ ಕೊಡುವಂಥದಾಗಿದೆಯೆಂದೂ ರಾಮನು ಹೇಳಿದನು. ''ಯತ್ನಿಸಿದ ಕಾರ್ಯವು ತೃಪ್ತಿಕರವಾಗಿ ನೆರವೇರಿದೆ. ಸೀತಾದೇವಿಗೆ ನಾವು ಕೊಡಬೇಕೆಂದಿದ್ದ ಭರವಸೆ ಆಕೆಗೆ ತಲುಪಿದೆ.'' ಎಂಬ ಸಂತೋಷದ ಸಮಾಚಾರವನ್ನೂ ಸಭೆಗೆ ತಿಳಿಸಲಾಯಿತು.

ರಾಮನನ್ನು ಸಂತೈಸಿ, ಹನುಮಂತನನ್ನು ಅಭಿನಂದಿಸಿ ಭಾಷಣ ಮಾಡುತ್ತ ಸುಗ್ರೀವನು ಇನ್ನು ಯುದ್ಧವು ಅನಿವಾರ್ಯವೆಂದೂ, ರಾಮನಿಗೋಸ್ಕರ ಕಪಿಗಳು ಅಗ್ನಿಯಲ್ಲಿ ಬೀಳುವುದಕ್ಕೂ ಸಿದ್ಧವೆಂದೂ ಭರವಸೆಯಿತ್ತನು.

—ಬಿ. ಜಂ.

ಫ್ಲಾಸ್ಕಿಗೆ!

[''ಶ್ರೀ''ಯವರ ಕ್ಷಮೆ ಬೇಡಿ]

★

ಮೊದಲು ಬಿಸಿಯ ಹಾಲಕುಡಿದು,
ಕಾವಿನಿಂದ ಕಳುಕ ನುಡಿದು,
ಬಿಸಿಯದೆಂದು ಹಳಿದು ಬಂದ
ಸೀಸೆಯಾವುದು—

ಕಾಫಿಯೊಲವ ತೆರೆದು ತಂದ
ಸೀಸೆಯಾವುದು—

ಸವಿಯ ತಿಂಡಿ, ಹಾಲು, ಕಾಫಿ,
ಹೊಟ್ಟೆಲೆರಗಿ, ಹಸಿವನಿಕ್ಕಿ,
ಸೊಗಸು ತಿಂಡಿ, ಸೊಗಸು ಕಾಫಿ,
ಎನಿಸಿತಾವುದು—

ಇನಿದು, ಬಿಸಿಯು ಎಂಬ ಕೋಡು
ತಲೆಗದಾವುದು—

ಥರ್ಮೋ ಫ್ಲಾಸ್ಕು ನಮ್ಮ ಸೀಸೆ,
ಕಾಫಿ ತರುವ ನಮ್ಮ ಕಣ್ಣು
ಶೀತವುರಿಸಿ, ಬಿಸಿಯನಿರಿಸಿ
ಬಳಿಗೆ ಸುಳಿಯಿತು—

ಕೆಲಸವೆಲ್ಲ ಬದಿಗೆ ಸರಿಸಿ
ಒಳಗೆ ಸುರಿಯಿತು

ಫ್ಲಾಸ್ಕಿಗೆ !

ಬಿಸಿಯ ಕಡಲ ಹೊನ್ನ ಹೆಣ್ಣು,
ಎಮ್ಮ ಜೀವದುಸಿರು, ಕಣ್ಣು
ಕುಡಿಸಿ, ತಿನಿಸಿ, ಮನವನೊಲಿಸಿ
ಕುಣಿಸುತಿರುವಳು

ಅಮ್ಮ ಅವಳು, ಹೊಳಪುರಾಣಿ
ಕುಣಿಸುತಿರುವಳು

ಹೀಗೆ ನನಗೆ ಹಬ್ಬವಾಗಿ
ಕಲ್ಲಿ ಚೀಲವನ್ನು ತೂಗಿ,
ಥರ್ಮೋ ಫ್ಲಾಸ್ಕನದರೊಳಿಟ್ಟು
ನೋಡ ಬಯಸಿದೆ,

ಇದರ ಹೊಳಪ ಅದರೊಳಿಟ್ಟು
ಹಾಡ ಬಯಸಿದೆ.

ಬಲ್ಲವರಿಗೆ ಬೆರಗೆ ಇಲ್ಲಿ ?
ಹಳ್ಳಿಯವರು ನಾಲ್ವರಲ್ಲಿ
ಫ್ಲಾಸ್ಕ ಬೆಳಕು ಹೊಳೆಯಲೆಂದು
ದಣಿದು ಹೋದೆನು.

ಬಡವನೆಳಲು ಸೇವೆಯೆಂದು
ಬೆನ್ನೊಳಾಂತೆನು.

ಜಿ. ಎ. ನ. ಬೆಂಗಳೂರು

"ಹಿಮ್ಮೇಳದವ"

ನಮ್ಮೂರಿನಲ್ಲಿ ಹರಿಕಥೆ ಇದ್ದ ದಿವಸ ನಮಗೆಲ್ಲಾ ಬಲು ಸಂತೋಷ. ಯಾರದಾದರೂ ಒಬ್ಬರ ಮನೆಯಲ್ಲಿ ಹರಿಕಥೆ-ಅಂದ ಮೇಲೆ ಮುಕ್ತಾಯದ ವೇಳೆಗೆ ಏನಾದರೂ ತಿಂಡಿ ಸಿಕ್ಕೇ ಸಿಗುತ್ತದೆ. ಇದರ ಜತೆಗೆ ದಾಸರು ವಿಧ ವಿಧವಾಗಿ ನಕ್ಕು ನಗಿಸಿ ಮಾತುಗಳನ್ನು ತಿರುಗ ಮುರುಗ ಜೋಡಿಸಿ ಹಾಡಿ, ಕುಪ್ಪಳಿಸಿ ಕುಷಿಪಡಿಸುತ್ತಾರೆ. ಇವೆಲ್ಲವೂ ಎಲ್ಲಾ ಹರಿಕಥೆಗಳಲ್ಲೂ ನಡೆಯುವುದೇ ಆಗಿರುತ್ತೆ. ಆದರೆ ಮೊನ್ನಿನ ದಿನ ನಡೆದ ಕಥೆಯಲ್ಲಿ ಇವುಗಳ ಜತೆಗೆ ಇನ್ನೊಂದು ಸೊಗಸಿನ ಅನುಭವ ದೊರಕಿತು. ಅದನ್ನೇ ಹೇಳ ಹೊರಟಿದ್ದೆ.

ಮೊನ್ನೆಯ ಕಥೆ ಗಜೇಂದ್ರ ಮೋಕ್ಷ. ಸುಮಾರಾದ ಗಜದಂತಿದ್ದ ದಾಸರು. ದಾಸರಿಗಿಂತ ಭಾರವಾದ ನಾಮ. ಇವರಿಬ್ಬರಿಗೂ ಮಿಗಿಲಾದ ಹಿಮ್ಮೇಳದವ. ಈ ಹಿಮ್ಮೇಳದವನಿಗೆ ಒಂದು ಹಿಡಿಯಷ್ಟು ಪುಳ್ಳು ಜುಟ್ಟು. ಹಿಮ್ಮೇಳದವನ ಆಂತರಿಕ ಭಾವನಾ ವಿಶೇಷಗಳೆಲ್ಲವೂ ಅವನ ಮುಖದಲ್ಲಿ ಮಾತ್ರವೇ ಅಲ್ಲ-ಈ ಪುಳ್ಳು ಜುಟ್ಟಿನ ವಿಲಾಸಗಳಿಂದಲೂ ತಿಳಿಯಬರುತ್ತಿತ್ತು. ಹೀಗಾಗಿ ಹಿಮ್ಮೇಳದವನ ಮೇಲೆಯೇ ನನ್ನ ದೃಷ್ಟಿಯೆಲ್ಲಾ ನಿಂತಿತು. ನೀವೇನಾದರೂ ಆ ಕಥೆಗೆ ಬಂದಿದ್ದರೆ ನಿಮಗೂ ಹಾಗೆಯೇ ಆಗುತ್ತಿತ್ತು ಎನ್ನುವುದಕ್ಕೆ ಏನೂ ಸಂದೇಹವಿಲ್ಲ. ಈ ತೆರನಾದ ಹಿಮ್ಮೇಳದವನನ್ನು ಕಟ್ಟಿಕೊಂಡ ದಾಸಯ್ಯನು ಪುರಂದರದಾಸನಾದುದು ಏನೂ ವಿಶೇಷವಲ್ಲ.

ನೋಡಿ ಮೊದಲು ಗಜೇಂದ್ರನು ಕಾಡಿನಲ್ಲೆಲ್ಲಾ ಓಡಾಡುತ್ತ ತನ್ನ ರಾಣೀವಾಸವನ್ನೆಲ್ಲಾ ನಕ್ಕು ನಗಿಸುತ್ತಾ ಅಲ್ಲಲ್ಲಿ ಇಲ್ಲಿಲ್ಲಿ ಕುಣಿದಾಡುತ್ತಾ ಜೀವಿಸುತ್ತಿದ್ದುದನ್ನು ದಾಸರು ವರ್ಣಿಸಲಾರಂಭಿಸಿದರು.

ಅಲ್ಲಿ ನುಗ್ಗಿ ಇಲ್ಲಿ ಸಾಗಿ
ನದಿಯ ಕೆಳದಿ ಬನದ ನಡುವೆ
ನೃತ್ತ ಲಾಸ್ಯ ಮಾಡುತಂ ।
ಇಲ್ಲಿ ನೆಗೆದು ಅಲ್ಲಿ ಬಾಗಿ
ಇಲ್ಲಿ ನಿಂತು ಅಲ್ಲಿ ನೋಡಿ
ಕೃತ್ಯ ಜೋಲ ಗೈಯುತಂ ।

ಈ ರೀತಿಯಾಗಿ ವಿಹರಿಸಿದುದೆಲ್ಲವನ್ನೂ ಸ್ವಾರಸ್ಯವಾಗಿ ದಾಸರು ಹಾಡು ನಟನೆಗಳಿಂದ ವಿಶದೀಕರಿಸಿದರು. ಸಾಕ್ಷಾತ್ ಗಜೇಂದ್ರನೇ ನಮ್ಮೆದುರಿಗೆ ಓಲಾಡುತ್ತಿದ್ದಂತೆ

ತೋರುತ್ತಿತ್ತು. ಇಲ್ಲ! ಇದು ಕಥೆ ಎಂದು ಅನುಮಾನ ಬರುವಂತಾದಾಗ ಹಿಮ್ಮೇಳದವನ ಕಡೆ ನೋಡಿದರೆ ಸಾಕು. ಅಲ್ಲ! ಇದು ಸತ್ಯವಾಗಿ ನಡೆದದ್ದೇ. ಇವರಿಬ್ಬರೂ ನೋಡಿದ್ದನ್ನೇ ಹೇಳುತ್ತಿದ್ದಾರೆ ಎಂದು ಖಂಡಿತವಾಗಿ ತಿಳಿಯುತ್ತಿತ್ತು. ಗಜೇಂದ್ರನ ಸೊಂಡಲಿನಂತೆಯೇ ಹಿಮ್ಮೇಳದವನ ಪುಳ್ಳ ಜುಟ್ಟೂ ಓಲಾಡುತ್ತಿತ್ತು. ಗಜೇಂದ್ರನು ನದಿಯ ಬಳಿಗೆ ಹೋದ ಎಂದರೆ ಪುಳ್ಳ ಜುಟ್ಟು ನೀರು ನೀರಾಗಿ ತೊಯ್ದು, ಹಿಮ್ಮೇಳದವನು ಒರೆಸಿಕೊಳ್ಳುವಂತಾಗುತ್ತಿತ್ತು. ದಂಡಕಾರಣ್ಯ, ದಟ್ಟವಾದ ಕಾಡು. ಕೊಂಬೆಗಳನ್ನು ಮುರಿದು ಹಾದಿ ಮಾಡಿಕೊಂಡು ಸಾಗಿದನು ಗಜೇಂದ್ರ ಎಂದರೆ ಜುಟ್ಟು ಜಟೆ ಕಟ್ಟಿದಂತೆ ಕೂಡಿಕೊಳ್ಳುತ್ತಿತ್ತು. ಘಟಸರ್ಪವೊಂದು ಕಾಣಿಸಿತು ಗಜೇಂದ್ರನಿಗೆ ಎಂದು ದಾಸರಂದರೆ ಪುಳ್ಳ ಜುಟ್ಟು ಕೂಡ ಹೆಡೆ ಬಿಚ್ಚಿದಂತೆ ಅಗಲವಾಗುತ್ತಿತ್ತು. ಕಾಣದೆ ಗಜೇಂದ್ರನು ಹಾವಿನ ತಲೆಯ ಮೇಲೆ ಕಾಲಿಟ್ಟ ಎನ್ನುವ ವೇಳೆಗೆ ಬಿಚ್ಚಿದ ಜಡೆಯಂ ಹಿಮ್ಮೇಳದವಂ ಕೂಡಿಸಿ ಕಟ್ಟುತಿರ್ದಂ—ಇದೇನಯ್ಯಾ ಹೊಸ ಹಳಗನ್ನಡ ಎನ್ನಬಹುದು ನೀವು. ಹಾವಿನ ಚರಮ ಗೀತಕ್ಕೆ ಇದೇ ಸೊಗಸು. ಸಾವನ್ನು ಸೂಚಿಸಿದರೂ ಸೌಖ್ಯವನ್ನು ತೋರ್ಪಡಿಸಲು ಮಹತ್ತರ ಭಾಷೆ ಮಾತುಗಳು ಬೇಕೆ ಬೇಕು!

ಇದೇ ರೀತಿ ಕಥೆಯುದ್ದಕ್ಕೂ ಪುಳ್ಳ ಜುಟ್ಟು ಹಿಮ್ಮೇಳ ಕೊಡುತ್ತಿತ್ತು. ಗಜೇಂದ್ರನ ಕಾಲನ್ನು ಮೊಸಳೆ ಹಿಡಿಯಿತು ಎಂದಾಗ ಜೋಲು ಬಿದ್ದ ಜುಟ್ಟು, "ಸಾಕ್ಷಾತ್ ಶ್ರೀಮನ್ಮಹಾವಿಷ್ಣುವು ಒಡ್ಡೋಲಗದಲ್ಲಿದ್ದು ಗಜೇಂದ್ರನ ಮೊರೆಯನ್ನು ಕೇಳಿದ ಕೂಡಲೆ ಭೂಲೋಕಕ್ಕೆ ಹೊರಟನು. ಹತ್ತಿರಿದ್ದ ರುಕ್ಮಿಣಿಯು ಕೇಳಿದಳು ಎಲ್ಲಿಗೆ ಎಂದು. ಗ ಎಂದು ಆರಂಭಿಸಿ ಜಂ ಎನ್ನುತ್ತಲೇ ಬಂದಿಳಿದನು ಗಜೇಂದ್ರನ ಹತ್ತಿರಕ್ಕೆ ಎಂದು ದಾಸರು ಹೇಳುವ ತನಕ ಹಿಮ್ಮೇಳದವನು ತನ್ನ ಕಾಲನ್ನೇ ತಡವರಿಸಿಕೊಳ್ಳುತ್ತಿದ್ದನೇ ಹೊರತು, ಜುಟ್ಟು ಗಂಟಿಕ್ಕಲಿಲ್ಲ. ಇವನ ಕಥಾನಿರತೆಯನ್ನು ನೋಡಿ ನನಗೆ ಖಂಡಿತವಾಗಿಯೂ ತಲೆತೂಗುವಂತಾಯಿತು.

ಕಥೆಯು ಮುಗಿಯಿತು. "ನೀನಾಮಾ ರೂಪಮುನಕು" ಅದೂ ಮುಗಿಯಿತು. ನನ್ನ ಹಿರಿಯಾಶೆಯು ಕೈಕೂಡುವ ಸಮಯವೂ ಒದಗಿತು. ನೆಟ್ಟಗೆ ಓಡಿದೆ ದಾಸರ ಹಿಂದಿದ್ದ ಹಿಮ್ಮೇಳದವನ ಹತ್ತಿರಕ್ಕೆ. "ಅಯ್ಯಾ ಸ್ವಾಮಿ. ನೀವು ಕತೆಯಲ್ಲಿ ಪೂರ್ಣ ಆವೇಶವುಳ್ಳವರು. ಗಜೇಂದ್ರನು ನಿಮಗೆ ಒಲಿದಿದ್ದಾನೆ, ನೀವು ಹೀಗೆಯೇ ಕೂತು ಕೂತು ಹಿಮ್ಮೇಳ ಬಾರಿಸುತ್ತಿದ್ದರೆ ಗಜೇಂದ್ರನಂತಾಗುವುದರಲ್ಲಿ, ಭಾರೀ ಭಗವದ್ಭಕ್ತರಾಗುವುದರಲ್ಲಿ ಏನೂ ಅನುಮಾನವಿಲ್ಲ. ನಿಮ್ಮ ಪರಿಚಯಕ್ಕಾಗಿ, ನಿಮಗೆ ನನ್ನ ವಂದನೆಗಳನ್ನು ಅರ್ಪಿಸುವುದಕ್ಕಾಗಿ, ಓಡಿಬಂದೆ" ಎಂದು ಹೇಳುವುದಕ್ಕೆ ಬಾಯಿ ತೆರೆದೆ.

ಜುಟ್ಟುಗಂಟುಹಾಕಿಕೊಂಡವನು ಎರಡು ನಿಮಿಷಕ್ಕೊಂದಾವರ್ತಿ ಕಾಲು ತಡವರಿಸಿಕೊಳ್ಳುತ್ತಿದ್ದನು. ಅಯ್ಯೋ! ಕಥೆ ಮುಗಿದರೂ ಕಾಲು ನೋವು, ಮೊಸಳೆಯ ಊಹನಾ ಭಾವನಾ ಕಚ್ಚುವಿಕೆಯು ಇನ್ನೂ ತ್ರಾಸಗೊಳಿಸುತ್ತಿದೆಯಲ್ಲಾ. ಎಂದು ಮನಸ್ಸಿನಲ್ಲಿಯೇ ಅಂದುಕೊಂಡು, ಇರಲಿ ನನ್ನ "ಅಯ್ಯಾ ಸ್ವಾಮಿ........" ಇತ್ಯಾದಿ ಹೇಳಲು ಆರಂಭಿಸಿದೆ.

ನಾನು ಮಾತನಾಡಲು ಆರಂಭಿಸುವ ಮೊದಲೇ ಆತನೇ ಬಾಯ್ತೆರದನು. ಬ್ರಹ್ಮಾಂಡವೇ ಈತನ ಬಾಯಲ್ಲಿ ಕಂಡುಬರುತ್ತದೋ ಎಂದು ಎವೆಯಿಕ್ಕದೆ ನೋಡುತ್ತಿದ್ದೆ. ತೆರೆದ ಬಾಯಿಂದ ಬಂದ ಶಬ್ದಗಳಿವು-ಶಬ್ದಗಳೇನು-ವಾಕ್ಯಗಳಿವು-

"ಹಾಳು ಕಟ್ಟಿರುವೆಗಳಯ್ಯಾ-ಕಾಲನ್ನೆಲ್ಲಾ ಕಟಕಾರಿಸಿಬಿಟ್ಟವು."

ಹೊಸ ಸಿನೀಮಾ ಒಂದರಲ್ಲಿ ಸ್ತ್ರೀಯರ ಉಡುಪಿಗೆ ತಕ್ಕಂತೆ ಸಂಗೀತದ ಹಿನ್ನೆಲೆಯಿದೆಯಂತೆ—

—ಕೆಲವು ಭಾಗ ಸಂಗೀತವು ಮುಕ್ಕಾಲುಪಾಲು ಕೇಳಿಸದೆ ಇರಬೇಕು.

* * *

ಕವಿಯೊಬ್ಬನು ತನ್ನ ಪದ್ಯಗಳನ್ನು ಕನ್ನಂಬಾಡಿಕಟ್ಟೆಯಮೇಲೆ ನಿಂತು ಬರೆಯುವನಂತೆ.

—ಬರೆಯುತ್ತ ಬರೆಯುತ್ತ ಪಶ್ಚಿಮಕ್ಕೆ ಕಾಲು ಹಾಕಿದರೆ ಒಳ್ಳೆಯದೆಂಬ ಸೂಚನೆಯನ್ನು ನಾವು ಒಪ್ಪಲಾರೆವು.

* * *

ಹೆಬ್ಬಿ ಗುಬ್ಬಾಲೆಯಲ್ಲಿ ಕ್ಷಾಮ ಬಂದಿರುವುದು ಖಂಡಿತ.

—ಎಷ್ಟೋ ಜನರು ಎರವಲು ತೆಗೆದ ಛತ್ರಿಗಳನ್ನು ವಾಪಸ್ಸು ಮಾಡುತ್ತಿದ್ದಾರಂತೆ.

* * *

ಇನ್ನುಮೇಲೆ ಶಾಲೆಗಳಲ್ಲಿ ಹಾರ್ಮೋನಿಯಂ ಹೇಳಿಕೊಡುತ್ತಾರಂತೆ.

—ಹುಡುಗರು ಎಚ್ಚರವಾಗಿರುವಂತೆ ಮಾಡಲು ಯಾವ ಉಪಾಯ ಹೂಡಿದರೂ ಸಾರ್ಥಕವೇ —

ಕೈಮರ

—೦—

ಹೆಬ್ಬಿ ಗುಬ್ಬಾಲಿಯಿಂದ ನೆರೆಯೂರಿಗೆ ಹೋಗುವ ಹೆದ್ದಾರಿಯಲ್ಲಿ ಒಂದು ಕೈಮರವಿದೆ. ಊರಾಚೆ ಒಂದು ಫರ್ಲಾಂಗ್ ದೂರದಲ್ಲೇ ಮೈಲಿ ಕಲ್ಲಿನ ಜತೆಯಾಗಿ ಈ ಕೈ-ಮರವು ನಿಂತಿದೆ. ಅಲ್ಲಿಯೇ ಹೆದ್ದಾರಿಯು ಕವಲೊಡೆದು ಮೂರು ದಾರಿಗಳಾಗಿವೆ. ಅವುಗಳನ್ನು ಸೂಚಿಸಲೋಸುಗವೇ ಈ ಕೈಮರದ ಸ್ಥಾಪನೆಯಾಗಿದ್ದು.

ಕೆಲವು ದಿನಗಳ ಹಿಂದೆ ನಡೆದ ಅಪಘಾತದ ಪರಿಣಾಮವಾಗಿ ಇಂದು ಕೈಮರವು ತಲೆ ತಗ್ಗಿಸಿದೆ. ಮಂಗಳೂರಿಗೆ ೧೨೦ ಮೈಲಿ ಎಂದು ಬರೆದ ಕೈ ಈಗ ಸ್ವರ್ಗದ ದಿಕ್ಕನ್ನು ತೋರಿಸುತ್ತಿದೆ. ಬೆಂಗಳೂರಿಗೆ ೧೬೦ ಮೈಲಿ ಎಂಬ ಕೈ ಈಗ ನರಕದ ಕಡೆಗೆ ಬೆರಳು ತೋರಿಸುತ್ತಿದೆ. ಜಂಗನ ಹಳ್ಳಿಗೆ ಎಂದು ಸಾರುವ ಕೈ ಮೂರು ಕಡೆಗಳಲ್ಲಿ ಬಗ್ಗಿ ಬಂದ ದಾರಿಯನ್ನೇ ಸೂಚಿಸುತ್ತೆ. ಹೀಗಾಗಿ ಈ ಕೈಮರದ ಪ್ರಯೋಜನ ಪ್ರಯಾಣಿಕರಿಗೆ ಅಷ್ಟಾಗಿ ಇಲ್ಲ ಈ ಕೈಮರವಿಲ್ಲದ ಕಾಲದಲ್ಲಿ ಹಾದಿಗರೆಲ್ಲರೂ ರಸ್ತೆಯ ಆಧಾನ ನಿಧಾನಗಳನ್ನು ನೋಡಿಕೊಂಡು, ರೂಪಾಯಿ ಭಂಗಿಸಿ ರಾಜ, ಅಕ್ಷರದ ಶಾಸ್ತ್ರರೀತಿಯಾಗಿ ಯಾವುದಾದರೂ ಹಾದಿ ಹಿಡಿದು ಮುಂದುವರಿಯುತ್ತಿದ್ದರು. ಈ ಹಾಳು ಕೈಮರ ಬಂದ ಮೇಲೆ ಅಲ್ಲಿ ನಿಂತು ಈ ಮರದ ಸಾಹಿತ್ಯವನ್ನು ನೋಡಿ ಅದನ್ನು ಅರ್ಥಮಾಡಿಕೊಳ್ಳುವುದರೊಳಗೇ ಅರ್ಧತಾಸು ವ್ಯರ್ಥವಾಗುತ್ತದೆ. ಹಾಗಾದರೂ ಇತ್ಯರ್ಥವಾಗುವುದಿಲ್ಲ. ಹಾಗಾಗಿ ಹತ್ತಿರದ ಕಲ್ಲು ಬಂಡೆಯ ಮೇಲೆ ಹಾಡು ಹೇಳುತ್ತ ಕುರಿಕಾಯುತ್ತಿರುವ ಹೆಬ್ಬಿಯೆಂಗ್ಟನ ಸಹಾಯ ಕೇಳಲೇಬೇಕಾಗುತ್ತೆ.

ಹೆಬ್ಬಿ ಯೆಂಗ್ಟನು ಕೈಮರಕ್ಕೆ ಮುಂಚೆಯೇ ಜನ್ಮವೆತ್ತಿದವನು. ಈಗ್ಗೆ ಸುಮಾರು ಅವನಿಗೆ ೬೦ ವಯಸ್ಸಾಗಿರಬೇಕು. ಅವನು ಹುಟ್ಟುವ ವೇಳೆಗೆ ಕೈಮರವು ಇನ್ನೂ ಹಸುರಾಗಿ ತಾಯಿಯ ಆಸರೆಯಲ್ಲೇ ಬೆಳೆಯುತ್ತಿತ್ತು. ಕಳೆದ ೫೦-೫೫ ವರ್ಷಗಳಿಂದ ಯೆಂಗ್ಟನಿಗೆ ಒಂದೇ ಕೆಲಸ- ಬೆಳಗಾಗುತ್ತಲೂ ತಂಗಳು ತಿಂದು ಕುರಿಗಳನ್ನು ಹೊಡೆದುಕೊಂಡು ಬಂದು ಹಾದಿಯ ಹತ್ತಿರದಲ್ಲಿದ್ದ ಕಾವಲಿನಲ್ಲಿ ಮೇಯಿಸುವುದು. ಹತ್ತಿರದಲ್ಲಿದ್ದ ಬಂಡೆಯ ಮೇಲೆ ಕುಳಿತು ತೋಚಿದ್ದನ್ನು ತೋಚಿದ್ದಂತೆ ಸ್ವತಂತ್ರವಾಗಿ ಹಾಡುವುದು. ಮಧ್ಯಾಹ್ನ ತಾನು ತಂದ ಬುತ್ತಿಯನ್ನು ಭಕ್ಷಿಸುವುದು. ಸಾಯಂಕಾಲ ಆದಮೇಲೆ ಕುರಿಗಳನ್ನು ಹೊಡೆದುಕೊಂಡು ಹಿಂತಿರುಗಿ ಹಟ್ಟಿಗೆ ಬರುವುದು. ಇವೆಲ್ಲಕ್ಕೂ ಮಿಗಿಲಾಗಿ ಹಾದಿಯಲ್ಲಿ ಹೋಗುವ ಪ್ರಯಾಣಿಕ

ರಿಗೆ ಹಾದಿ ತೋರಿಸುವುದು. ಹೀಗಾಗಿ ಕೈಮರ ಮೈಲಿ ಕಲ್ಲಿನ ಜತೆಗೆ ಯೆಂಗ್ಟನು ಒಬ್ಬ ಸ್ಥಿರದರ್ಶಕನಾಗಿದ್ದ.

ಯೆಂಗ್ಟನಿಗೆ ಆ ಕೈಮರವನ್ನು ಸ್ಥಾಪಿಸಿದಾಗಲಿನಿಂದ ಒಂದು ತೆರನಾದ ಮತ್ಸರ. ನಾನು ಮಾಡುತ್ತಿದ್ದ ಕೆಲಸಕ್ಕೂ ಈಗ ಪೈಪೋಟಿಯಾಗುವಂತೆ ಮಾಡಿದರಲ್ಲ ಎಂದು ಒಂದು ದುಃಖ. ಹೀಗಾಗಿ ಜನ್ಮವೆತ್ತಿದ ಒಂದು ವರ್ಷದಲ್ಲೇ ಮಂಗಳೂರಿಂದ ಬೆಂಗಳೂರಿಗೆಂದು ಹೊರಟ ಮೋಟಾರು ಲಾರಿಯೊಂದು ಈ ರಸ್ತೆಯಲ್ಲಿ ದಾರಿ ತಪ್ಪಿ ಬಂದು ಪರವಾಗಿಲ್ಲ ಈ ರಸ್ತೆಯಲ್ಲೂ ಬೆಂಗಳೂರು ಸೇರಬಹುದು, ಎಂದು ಆ ಹಾದಿಯ ಕಡೆ ತಿರುಗಲು ಪ್ರಯತ್ನಪಟ್ಟಾಗ ಆ ಲಾರಿಯನ್ನೂ ಈ ಕೈಮರವು ತಬ್ಬಿಕೊಳ್ಳುವ ಪ್ರಸಂಗ ಒದಗಿತು. ಯುದ್ಧೋನ್ಮುಖಿಯಾದ ಆ ಲಾರಿಯನ್ನು ಈ ರೀತಿ ಆದರದ ಆಲಿಂಗನ ಮಾಡಿದ್ದೆ ಆ ಕೈಮರದ ದೇಹವನ್ನು ಗುರ್ತು ಸಿಗದಂತೆ ಮಾಡಿದ್ದು. ಪಾಪ! ಆ ಕೈಮರವೇನೂ ಬಲ್ಲುದು! ಯುದ್ಧೋನ್ಮುಖಿಗಳ ಆಲಿಂಗನ ಪ್ರಯತ್ನದಿಂದಲೇ ಹಲವಾರು ಮನುಷ್ಯರೇ ಮರಣೋನ್ಮುಖಿಗಳಾಗಿರುವಲ್ಲಿ ಇನ್ನು ಲಾರಿಯ ಹಾವಳಿ ಕೇಳಬೇಕೆ? ಅಂತೂ ಇಂತೂ ಕೈಮರವ ಸ್ವರೂಪವೇ ನಾಶವಾದರೂ ಅದರ ಜೀವವನ್ನು ತೊರೆದಿಲ್ಲ. ಅಪಘಾತದ ಸೇಡು ತೀರಿಸಿಕೊಳ್ಳುವುದಕ್ಕೋ ಎಂಬಂತೆ ಈಗ ಅದು ಹಾದಿಗರ ಮನಸ್ಸು ಹಿಡಿದು ಅವರಿಗೆ ಮುಂದಿನ ಮಾರ್ಗವು ಕಾಣದಂತೆ ಅವರನ್ನು ಅರ್ಧಗಂಟೆ ಸತಾಯಿಸುತ್ತದೆ.

ಈಗ ಯೆಂಗ್ಟನಿಗೆ ಒಂದು ತರಹ ಸಂತೋಷ. ನನ್ನ ಮೇಲೆ ಪೈಪೋಟಿಗೆ ತಂದ ಈ ಕೈಮರ ಈಗೇನು ಮಾಡೀತು? ಈಗಲಾದರೂ ಹಾದಿಗರೆಲ್ಲಾ ನನ್ನನ್ನೇ ಕೇಳಬೇಕು ಎಂಬ ಸಮಾಧಾನ. ಇತ್ತೀಂದೀಚಿಗೆ ತನ್ನ ಸೌಹಾರ್ದವನ್ನು ತೋರಿಸಲೋಸುಗ ಬಿಸಿಲು ದಿನಗಳಲ್ಲಿ ತನ್ನ ಕಂಬಳಿಯನ್ನು ಈ ಕೈಮರಕ್ಕೇ ಹೊದಿಸುತ್ತಾನೆ.

ಯೆಂಗ್ಟನ ದಾರಿದರ್ಶಕತ್ವವು ಬಹಳ ಚಲೋರೀತಿಯದು. ಮಂಗಳೂರು ರಸ್ತೆ ಯಾವುದಯ್ಯಾ ಎಂದರೆ ನೋಡಿ ಬುದ್ಧಿ, ಈ ಎಡಕ್ಕೈ ರಸ್ತೆಯಲ್ಲಿ ರಾಮೇಗೌಡನ ಮನೆಯತನಕ ಹೋಗಿ ಅಲ್ಲಿ ಕೂಡ ಎಡಕೈ ರಸ್ತೆಗೆ ತಿರುಗಿ ನೇರವಾಗಿ ಹೋಗಿ ಅದೇ ಸಮುದ್ರದ ಕಡೆಗೆ ಹೋಗುತ್ತೆ ಎಂದು ಹೇಳುತ್ತಾ ಅಷ್ಟು ವೇಳೆಯೂ ತನ್ನ ಬಲಗೈ ಕಡೆಗೇ ಸೂಚನೆ ಕೊಡುತ್ತಿರುವನು.

ಬೆಂಗಳೂರು ರಸ್ತೆ ಕೇಳಿದಾಗಲೂ ಯಥಾಪ್ರಕಾರ ಬಲಗೈ ರಸ್ತೆಯಲ್ಲಿ ಹೋಗಿ ಎಂದು ಎಡಗೈಯಿಂದ ಸೂಚನೆ ಕೊಡುವನು. ಬಂದವರಿಗೆ ಇವನ ಸೂಚನೆ ಸಲಹೆಗಳಿಂದ ಏನೊಂದೂ ಪ್ರಯೋಜನವಾಗದೆ ಇದ್ದರೂ, ಯೆಂಗ್ಟನ ಮನಸ್ಸಿಗೆ ಏನೋ ನೆಮ್ಮದಿ. ಕೆಲವು ದಿನಗಳ ಹಿಂದೆ ಯಾರೋ ಒಬ್ಬರು ಮೋಟಾರಿನಲ್ಲಿ ಬಂದಿದ್ದವರು ಈ ರಸ್ತೆ ತ್ರಿಸಂಗಮದ ಹತ್ತಿರ ಬಂದು ಎಲ್ಲರಂತೆ ಅನುಮಾನ ಪರಿಗ್ರಸ್ತರಾಗಿ ಯೆಂಗ್ಟನನ್ನು ಕೇಳಿದರಂತೆ. ಯೆಂಗ್ಟನೂ ತನ್ನ ಕೈಯಿಂದ ಬಲದಿಕ್ಕನ್ನು

ತೋರಿಸುತ್ತಾ, ಎಡಗಡೆಗೆ ಹೋಗಿ ಸಿಡಿಲುಬಡಿದ ಕಡೆ ಪೂರ್ತಿ ತಿರುಗಬೇಕು, ಎಂದು ಹೇಳಿ ತಾನು ದೇಹವನ್ನು ಪೂರ್ತಿ ತಿರುಗಿಸಿ ಹೀಗೆ ಎಂದು ಚಿತ್ರಿಸಿದನಂತೆ. ಬಂದಿದ್ದವರು ಅವಸರದಲ್ಲಿದ್ದರಂತೆ. ಅಂತಾಗಿ ಇವನ ಸಲಹೆಗಳಿಂದ ತೃಪ್ತಿಗೊಳ್ಳದೆ ರೇಗಿಬಿಟ್ಟರಂತೆ. ಅಲ್ಲದೆ ಜೊತೆಯಲ್ಲಿದ್ದವನಿಗೆ ಇಲ್ಲಿನ ಕೈಮುರವನ್ನು ಸರಿಮಾಡಿಸಬೇಕು ಊರಿಗೆ ಹೋಗುತ್ತಿದ್ದ ಹಾಗೆಯೇ ಜ್ಞಾಪಿಸು ಎಂದರಂತೆ. ಯೆಂಗ್ಟನಿಗೆ ಒಂದು ಅನುಮಾನ. ದಿಟವಾಗಲೂ ಕೈಮುರವನ್ನೂ ಯಾರಾದರೂ ಸರಿಪಡಿಸುತ್ತಾರೇನೋ ಎಂದು. ಹಾಗೆ ಅವನು ಹಟ್ಟಿಗೆ ಬಂದು ದುಃಖ ಪಟ್ಟಾಗಳ್ಲೆಲ್ಲಾ ಅವನ ಮಗಳು ರಂಗಿಯು ಅವನಿಗೆ ಸ್ಥೈರ್ಯ ಹೇಳಿಯೇ ಹೇಳುತ್ತಾಳೆ. ಯಾಕಪ್ಪಾ ಯೋಚನೆ. ಸರಿಮಾಡಿದರೂ ಮಾಡಲಿ ಇನ್ನು ಇಷ್ಟು ಬೇಗ ಯುದ್ಧ ಮುಗಿಯುತ್ತೇ ! ಇನ್ನು ಯಾವುದಾದರೂ ಒಂದು ಸೈನ್ಯದ ಲಾರಿ ಈಕಡೆ ಒಂದೇ ಬರುತ್ತೆ ಎಂದು 'ಸಮಾಧಾನ ಹೇಳುತ್ತಾಳೆ.



"ಅಯ್ಯೋ, ಸ್ವಾಮಿ ನಿಮ್ಮ ನಾಯಿ ನನ್ನ ಕಾಲನ್ನು ಕಚ್ಚಿಬಿಟ್ಟಿತು" !!
"ಅದೆಲ್ಲಿಯೀವಾಗ" ?
"ಅದರ ಬಾಯಲ್ಲೇ ಇದೆ ಸ್ವಾಮೀ...."

“ಮಣ್ಣು ತಿಂದುದು”

—o—

ಯಾರಾದರೂ ನಿಮ್ಮಲ್ಲಿಗೆ ಬಂದು ಗ್ರಂಥಕರ್ತರೆಲ್ಲಾ ಪುಸ್ತಕವನ್ನೋ ಕಾದಂಬರಿಯನ್ನೋ ಬರೆಯುವುದಕ್ಕೆ ಆರು ತಿಂಗಳು ತೆಗೆದುಕೊಂಡರೆ ಅದಕ್ಕೆ ನಾಮಕರಣ ಮಾಡಲು ಮೂರು ತಿಂಗಳು ತೆಗೆದುಕೊಳ್ಳುತ್ತಾರೆ ಎಂದು ಹೇಳಿದರೆ ನೀವು ಮೊದಮೊದಲು ನಂಬುವುದೇ ಇಲ್ಲ. ಆದರೆ ನಮ್ಮ ಪ್ರಕಾಶಕ ಮಿತ್ರನ ಸಾಕ್ಷ್ಯವನ್ನು ಕೇಳಿದ ಮೇಲೆ ನೀವು ನಂಬಲೇ ಬೇಕು.

ನಮ್ಮ ಪ್ರಕಾಶಕ ಮಿತ್ರನು ಅನ್ವರ್ಥ ನಾಮಧ್ಯೇಯನಲ್ಲ. ಅವನು ಪ್ರಕಾಶಕನಲ್ಲ. ಆದರೆ ಪ್ರಕಾಶನಕ್ಕೆ ಸಹಾಯಕ. ಹಾಗಾಗಿ ಅವನನ್ನು ಸಾಮಾನ್ಯವಾಗಿ ಎಲ್ಲರೂ ಪ್ರಕಾಶಕ ಮಿತ್ರನೆಂದೇ ಕರೆಯುವರು. ಈತನ ಸಹಾಯವೇನೆಂದರೆ ಪುಸ್ತಕಗಳ, ಪ್ರಬಂಧಗಳ ನಾಮಕರಣಕ್ಕೆ ಸಲಹೆಗಳನ್ನು ಕೊಡುವುದು. ಯಾವಯಾವ ಕಾಲಗಳಲ್ಲಿ ಯಾವ ತರಹ ಹೆಸರಿಡಬೇಕೆಂದು ಸೂಚಿಸುವುದು. ಮೊದಮೊದಲು ನಾವೆಲ್ಲಾ ಇವನನ್ನು ನೋಡಿ ನಗುತ್ತಿದ್ದೆವು. ಈಗ ಅವನ ಮನೆ ಬಾಗಿಲಿಗೆ ಅಲೆದು ಅವನಿಂದ ಸಲಹೆ ಪಡೆದೇ ಹೆಸರಿಡುತ್ತೇವೆ.

ಮೊನ್ನೆ ದಿನ ನನ್ನ ಸ್ನೇಹಿತನು ತನ್ನ ಮೊದಲ ಪುಸ್ತಕವನ್ನು ಬರೆದ. ನಾನು ಅವನ್ನು ಓದುವ ತನಕ ಹಿಂದೂ ಮುಂದೂ ಅಲೆದು, ಕಡೆಗೆ ಅದರ ಹೆಸರನ್ನು ಹೊರಗೆಡವಿದ “ಅಂತರಾತ್ಮ.” ನಾನು ಕೂಡಲೇ ಹೇಳಿದೆ “ಇದೇನೊ ಹೆಸರು, ಅಂತರ್ಪಿಶಾಚಿಯ ತಮ್ಮಸಂತಿದೆ. ಬೇರೆ ಹೆಸರು ಸಿಗಲಿಲ್ಲವೇ” ಮಾರುತ್ತರ ಹೇಳಿದ “ನಿನ್ನದು ಯಾವಾಗಲೂ ಕುಚೋದ್ಯ. ನನ್ನ ಆತ್ಮಕಥೆಯನ್ನು ಬರೆದಿದ್ದೇನೆ. ಎಳೆಯ ಜೀವವು ಹೇಗೆ ಹೇಗೆ ನೊಂದಿದೆ ಅದೆಲ್ಲವನ್ನೂ ನಡೆದಂತೆ ವರ್ಣಿಸಿದ್ದೇನೆ. ಇದಕ್ಕೇ ಅಂತರಾತ್ಮ ಎಂದು ಹೆಸರಿಟ್ಟೆ ಎಂದ. ಪಾಪ! ಕಾಗದದ ಬೆಲೆಯು ಏರಿದಾಗ ಇಷ್ಟು ಕಾಗದ ಕೊಂಡು—ಅವನೇನೂ ಸರ್ಕಾರಿ ಆಫೀಸಿನಲ್ಲಿಲ್ಲ—ಇಷ್ಟು ಮಸಿ ವೆಚ್ಚಮಾಡಿ ಇಷ್ಟು ದಿವಸ ಬರೆದು, ಕಡೆಗೂ ಇಷ್ಟ್ವಸ್ತರಲ್ಲೇ ವ್ಯಾಪಾರವಾದರೆ ಮುಳುಗಿ ಹೋಗುತ್ತಾನಲ್ಲ ಎಂಬ ಕನಿಕರದಿಂದ ಅವನಿಗೆ ಹೇಳಿದೆ “ಬಾರಯ್ಯಾ ಪ್ರಕಾಶಕ ಮಿತ್ರನು ನನಗೆ ಪರಮ ಮಿತ್ರ. ಅವನ ಹತ್ತಿರ ಕರೆದುಕೊಂಡು ಹೋಗಿ ನಿನ್ನ ಪುಸ್ತಕಕ್ಕೆ ಮಾರಾಟಕ್ಕೆ ಸಹಾಯವಾಗುವಂತಹ ಹೆಸರನ್ನು ಕೊಡಿಸಿ ಕೊಡುತ್ತೇನೆ” ಎಂದು.

ಸರಿ. ಮಾರನೆಯ ದಿನವೇ ಪ್ರಕಾಶಕ ಮಿತ್ರನ ಹತ್ತಿರ ಹೋದೆವು. ಕಳೆದ ಮೂರು ತಿಂಗಳಿಂದ ಮುನ್ನೂರು ರೂಪಾಯಿ ತನಕ ಕ್ರಾಸ್‌ವರ್ಡಿಗೆ ದಂಡಮಾಡಿ

ಆ ತಿಂಗಳು ಅರವತ್ತು ರೂಪಾಯಿನ ಬಹುಮಾನವನ್ನು ಹೊಂದಿದ ಸಂತೋಷದಲ್ಲಿದ್ದುದರಿಂದ, ಪ್ರಕಾಶಕ ಮಿತ್ರನು ನಗುನಗುತ್ತಲೇ ಇದ್ದ. ನಮ್ಮನ್ನು ಆದರದಿಂದ ಬರಮಾಡಿಕೊಂಡ. ಕಾಫಿ ತಿಂಡಿಯನ್ನು ಕೊಟ್ಟ. ನನ್ನ ಮಿತ್ರನು ಹೇಳಿದುದನ್ನೆಲ್ಲಾ ಕೇಳಿದ ಅವನ ಹಸ್ತಪ್ರತಿಯನ್ನು ತಿರುವಿ ನೋಡಿದ ನಂತರ ಹೇಳಿದ.

"ಅಯ್ಯೋ ಜೂಜಿನ ಕುದುರೆಗಳ ಗೋತ್ರ ಸೂತ್ರ ಪ್ರವರ ಇವುಗಳನ್ನು ತಿಳಿಯದೆಯೇ ಕುದುರೆ ಜೂಜಿಗೆ ಹೋಗುವ ಮೂಢರಂತೆಯೇ ಗ್ರಂಥಕರ್ತರುಗಳು. ಯಾವ ಕಾಲದಲ್ಲಿ ತಮ್ಮ ಗ್ರಂಥವನ್ನು ಪ್ರಚುರಪಡಿಸಬೇಕೆಂದಿರುವರೋ ಆಗ ಕೊಳ್ಳುವ ಜನರ ಇಷ್ಟವು ಹೇಗಿರುತ್ತದೆ? ಯಾವ ವಿಷಯಗಳು ಅವರ ಮನಸ್ಸನ್ನೆಳೆಯುತ್ತವೆ? ಇದೊಂದನ್ನೂ ಯೋಚಿಸುವುದಿಲ್ಲ. ತಮಗೆ ತೋಚಿದ ಹೆಸರಿಡುತ್ತಾರೆ. ಇದರಿಂದಲೇ ಹಲವಾರು ಪುಸ್ತಕಗಳು ಮಾರಾಟವಾಗದೆ ಗ್ರಂಥಕರ್ತರ ಪುಸ್ತಕ ಭಂಡಾರವಾಗಿ ಪರಿಣಮಿಸುತ್ತದೆ. ನೋಡಿ, ಹೋದ ವರುಷ ಕೊಳ್ಳುವವರಿಗೆಲ್ಲಾ ನಕ್ಷತ್ರದ ಹುಚ್ಚು ಹಿಡಿದಿತ್ತು. ಮಾಸಭವಿಷ್ಯ, ವರ್ಷ ಭವಿಷ್ಯ, ಜನ್ಮ ಭವಿಷ್ಯ ಇವುಗಳ ಭ್ರಮಣೆ ಹುಟ್ಟಿತ್ತು. ಆಗ ಪ್ರಚುರವಾದ "ಧೂಮಕೇತು" ''ಧರ್ಮಜ್ಯೋತಿ" ''ಕೋಲ್ಮಿಂಚು" ಈ ಗ್ರಂಥಗಳೆಲ್ಲಾ ಬೇಕಾದಷ್ಟು ಮಾರಾಟವಾದುವು. ಅದೇ ಕಾಲದಲ್ಲಿ ಪ್ರಚುರವಾದ "ನವಮಿ" "ಪಾನಕ" "ಮೂಜೋರ್ಡು" "ಹಳ್ಳಿಯವನು" "ಹನಿಗಣ್ಣು" ಇವೊಂದೂ ಹತ್ತು ಹತ್ತು ಪ್ರತಿಗಳೂ ಮಾರಾಟವಾಗಲಿಲ್ಲ. ಅದಕ್ಕೆ ಮೂರು ವರುಷ ಮುಂಚೆ ಎಲ್ಲೆಲ್ಲೂ ಹಳ್ಳಿಯ ಮಾತೇ. ಎಲ್ಲರೂ ಹಳ್ಳಿಯೋನ್ನತಿಗೆ ಮನಸೋತಿದ್ದರು. ಹಳ್ಳಿಯ ಹೆಸರಿನ ಸೂಚನೆ ಇದ್ದ ಪುಸ್ತಕಗಳೆಲ್ಲವೂ ಹಿಂಡುಹಿಂಡಾಗಿ ಮಾರಾಟವಾಯಿತು. ಆಗ ಪ್ರಕಟವಾದ 'ಹಳ್ಳಿಯ ಚಿತ್ರಗಳು" "ಗ್ರಾಮಪಂಚಾನನ'' ''ಕುರಿಹಿಂಡು'' ಪುಸ್ತಕಗಳು ಈಗ ಸಿಗುವುದೇ ಇಲ್ಲ. ಆದರೆ "ತಲೆಮಾರಿದುದು" ''ಹರಕುಮುಂಡನ'' ''ತಾಳಿ ನೂಪುರ'' ಇವುಗಳೊಂದೂ ಮಾರಾಟವಾಗಲಿಲ್ಲ. ಪ್ರಕೃತದಲ್ಲಿ ಈಗ ಎಲ್ಲೆಲ್ಲೂ ಮಣ್ಣು, ಹಳ್ಳಿಯೂರುಗಳು, ಆರಂಬದ ಜೀವನ, ಕೃಷಿಯ ಸೌಭಾಗ್ಯಗಳು, ಬಿತ್ತನೆಯ ವಿಶೇಷಗಳು, ಇವುಗಳ ಮಾತೇ ಮಾತು. ಅಕ್ಕಿಯ ಬೆಲೆಯು ಏರಿದಂತೆಲ್ಲಾ ಭತ್ತದ ಮೇಲೆ ಜನರ ಮನಸ್ಸು, ಜಮೀನನ ಕಡೆಗೇ ಅವರ ದೃಷ್ಟಿ. ಏನು ಸುಖಪುರುಷ ರೈತ! ಹೊಟ್ಟೆ ತುಂಬ ಉಣ್ಣುವಷ್ಟು ಭತ್ತ ಇಟ್ಟಿರುತ್ತಾನೆ. ಅವನೇನೂ ರೂಪಾಯಿಗೆ ಎರಡು ಸೇರು ಅಕ್ಕಿ ತರಬೇಕಾಗಿಲ್ಲ ಎನ್ನುವ ಯೋಚನೆ. ಭತ್ತ ಎಲ್ಲಿಂದ ಬರುತ್ತೆ ಎಂದರೆ ರೈಲಿನಿಂದ ಎನ್ನುವಷ್ಟು ಪ್ರಪಂಚ ಪರಿಚಯವಿದ್ದವರೂ ಕೂಡ ಈಗ ಗ್ರಾಮೋದ್ಧಾರದ ಮಾತನ್ನೆತ್ತುತ್ತಿದ್ದಾರೆ. ಹಾಗಾಗಿ ನೋಡಿ "ಕಾನೂನು ಹೆಗ್ಗಡೆ"ಯು ದೋಸೆಯಂತೆ ಮಾರಾಟವಾಯಿತು. "ಮರಳಿ ಮಣ್ಣಿಗೆ''ಯು ಮೂಲೆ ಮೂಲೆ ಮನೆಗಳ

ಲ್ಲೂ ಬಿಡಾರ ಮಾಡಿದೆ ಈಗ ಸಾರ್ಥಕವಾಗ ಬೇಕಾದರೆ ನಿಮ್ಮ ಪುಸ್ತುಕಕ್ಕೆ ಮಣ್ಣು ಭತ್ತ, ಜಮೀನು, ನಾಲೆ, ರಾಗಿ ಇವುಗಳನ್ನು ಸೂಚಿಸುವ ಹೆಸರಿಡಬೇಕು."

ನನ್ನ ಸ್ನೇಹಿತನಂದನು: "ನನ್ನ ಪುಸ್ತಕವು ಆತ್ಮ ಕಥೆ, ಇದರಲ್ಲಿ ಮಣ್ಣೆಲ್ಲಿ ಬಂತು. ನಾನು ಹುಟ್ಟಿದ್ದು ದಿವ್ಯವಾದ ಕಲ್ಲುಕಟ್ಟಡದ ಆಸ್ಪತ್ರೆಯಲ್ಲಿ. ಬೆಳೆದಿದ್ದು ದಿವ್ಯವಾದ ಉಪ್ಪರಿಗೆ ಅನಾಥಾಲಾಯದಲ್ಲಿ. ಎರಡೂ ಕಡೆಯೂ ಮಣ್ಣೇ ಕಾಣಲಿಲ್ಲ. ಭತ್ತ ಮೊದಲೇ ಇಲ್ಲ. ಇದಕ್ಕೇನು ಮಾಡುವುದು"

"ಅದಕ್ಕೇನ್ರೀರಾಯರೇ ಯೋಚಿಸುತ್ತೀರಿ ಎಲ್ಲಿದ್ದರೂ ನೀವು ಮಣ್ಣು ತಿಂದಂತೆಯೇ ಅಲ್ಲವೆ. "ಮಣ್ಣು ತಿಂದುದು" ಎಂದು ಹೆಸರಿಡಿ. ವ್ಯಾಪಾರವಾದರೆ ಕೊಂಡವರು ತಿಂದಂತಾಯಿತು. ಆಗದೆ ಇದ್ದರೆ ಸಾರ್ಥಕವಾದುದಾಯಿತು" ಎಂದನು.

"ಮಣ್ಣು ತಿಂದುದು" ಯಥೇಚ್ಛವಾಗಿ ಮಾರಾಟವಾಯಿತು.

"ಹೇಗಿದೆ ಉಪಾಯ ?"

"ಇನ್ನೇನು ಸಾರ್....ಕಾಫಿಯೋ....ಟೀಯೋ ...ಇಲ್ಲಾ
ಕೋ ಕೋ ನೋ ?...ಓವಲ್ಟಿನ್ ಕೊಡಲೇನ್ ಸಾರ್?"

....

" ಆಂ ...?....ಎರಡರ್ಧ ಕಾಫಿ "

ಮತ್ತೆ ಓದತೊಡಗಿದೆ. ಹೋಟೆಲಲ್ಲಿ ನಾನು ಹೇಳುತ್ತಿರೋ ಸಂಗತಿ ನಡೆದದ್ದು "ಸಂಭವಾಮಿ ದಿನೇ ದಿನೇ" ಅಂತ ಬಂದ್ಬಿಡ್ತಾನೆ ಹಾಳು ಬೆಂಕೂ. ಕಾಫೀ ಅಂತ ಹಿಂಡ್ತಾನೆ. ಸುಖಾನಂದ ಭವನವೇ ನನ್ನ ಕಾಲದ ಹೋಟೆಲು ಒಂದೇ. ಅಲ್ಲಿಗೆ ಸೀದಾ ಎಳ್ಕೊಂಡು ಹೋಗಿ "ಏನಾದ್ರೂ ಸೀ ಹೇಳು ಅಂದ. ಜೀಲೇಬಿ ಆಯ್ತು. ಖಾರಾ ಅಂದ. ಎರಡು ಮಸಾಲೆ. ಇಂಟರ್‌ವಲ್‌ನಲ್ಲಿ ಚಾ ಚಾ. ನನ್ನನ್ನು ಕೇಳಿದಾಗ ನನ್ನ ಗಮನ, ಅವನು ಕೈ ಒರಸಿಕೊಳ್ಳುವುದಕ್ಕೆ ಕೊಟ್ಟ ಕಾಗದದ ಮೇಲೆ ಇತ್ತು ಯಾವುದೋ ಪುಸ್ತಕದ ಹಾಳೆ. ಕನ್ನಡ ಕಾದಂಬರಿ... ಧುರಾಣಿ ಅಂತ ತುಂಡುನಾಮ. ಏನೋ ಸ್ವಾರಸ್ಯ ಇರಬೇಕು ಅಂತ ಓದಿದೆ. ಯಾವುದೋ ಹೆಂಗಸಿನ ಕಥೆ ಪೂರ್ತಿಯೇ ಓದಿಯೇ ಬಿಟ್ಟೆ !

ನನ್ನ ತಮ್ಮ ಎಸ್ಸೆಸ್ಸೆಲ್ಸಿ ಅವನ ಲೈಬ್ರರಿಯಿಂದ ತರಿಸಿ ಓದಿದೆ. ಆವತ್ತಿನಿಂದ ಯಾಕೋ ಏನೊ ನನಗೆ 'ಸಾಹಿತ್ಯ'ದಲ್ಲಿ ಅಭಿರುಚಿ.

ಸಾಹಿತಿಗಳಲ್ಲಿ ಒಂದುಬಿನ್ನಹ. ಕೋಪಿಸಿಕೊಳ್ಳಬೇಡಿ–ಕೋಪಿಸ್ಕೊಂಡರೂ ಪರವಾಗಿಲ್ಲಾ ಅನ್ನಿ....ಇಷ್ಟೆ ಸಮಾಚಾರ, ದಯವಿಟ್ಟು ನೀವು ಬರೆದಿರುವ ಕೃತಿಗಳಲ್ಲಿ ಅತ್ಯುತ್ತಮವೆಂದು ನೀವು ತಿಳಿದುಕೊಂಡಿರುವ ಪುಟಗಳನ್ನೇ ಪ್ರಕಟಿಸಿ, ಹೋಟೆಲು ಮಾಲೀಕರಿಗೆ ಕೊಡಿ. ಜನರಿಗೆ ಕೈ ಒರಸ್ಕೊಳ್ಳೋಕೆ ಅವರು ಕೊಟ್ಟೇ ಕೊಡ್ತಾರೆ. ಆಗ ನಿಮ್ಮ ಪುಸ್ತಕಗಳಲ್ಲಿ ಅಭಿರುಚಿಹುಟ್ಟುತ್ತೆ.

ಒಂದು ಕೈನೋಡಿ ! ಏನೋ ದೇವರಿದ್ದಾನೆ.

—ಮೂರ್ತಿ

ಗಂಡು ಲೋಕ

ಕಡೆಗೂ ನಾರಾಯಣಸ್ವಾಮಿಗೆ ಮನೆ ಸಿಕ್ಕಿತು. ಯಾವುದೋ ಕಿಷ್ಕಿಂಧೆ. ಆದರೂ ಪರವಾಗಿಲ್ಲ. ದೊಡ್ಡವರ ಸಹ ವಾಸ. ಲಾಯರ್ ಶ್ರೀನಿವಾಸರಾಯರ ಔಟ್ ಹೌಸು. ಅಂದರೆ, ಅವರ ಮೋಟಾರ್ ಮನೆಯ ಪಕ್ಕದಲ್ಲೇ ಎರಡು ಇಕ್ಕಟ್ಟಾದ ರೂಮುಗಳು. ಪಾಪ. ಅಷ್ಟಾದರೂ ಸಿಕ್ಕಿತಲ್ಲ ಅಂತ ಹಿಗ್ಗಿ ಹೀರೇಕಾಯಿ ಆದ. ತುಂಕೂರಿಂದ ಗೃಹಲಕ್ಷ್ಮಿಯನ್ನೂ ಆಕೆಯ ತಮ್ಮ-ಎಸ್. ಎಸ್. ಎಲ್. ಸೀ ವಿದ್ಯಾರ್ಥಿಯನ್ನೂ ಕರೆಸಿದ. ಈಚೆಗೆ ಮನೆ ಆಯಿತು ಆಫೀಸಾಯಿತು. ತನ್ನ ಪಾಡಿಗೆ ತಾನು. ಹಿಂದೆ ನಾವಿಬ್ಬರೂ ತಪ್ಪದೆ ಪಾಲ್ ಮುನಿಯನ್ನು-ಆತ ಎಲ್ಲಿಗೆ ಬಂದರೂ-ನೋಡುತ್ತಿದ್ದೆವು. ಮೊನ್ನೆ ಪಾಲ್‌ಮುನಿ ಮೆಜಸ್ಟಿಕ್‌ಗೆ ಬಂದಿದ್ದ. ಅವತ್ತು ನಾನು ನಾರಾಯಣಸ್ವಾಮಿಯನ್ನ ಹುಡುಕಿಕೊಂಡು ಎಲ್ಲೆಲ್ಲೋ ಅಲೆದೆ. ಆಫೀಸಿಗೆ ಹೋದರೆ, ಗ್ರಹಚಾರಕ್ಕೆ ಸರಿಯಾಗಿ, ಅವನ ಆಫೀಸರು ಕೋ ಆಪರೇಟಿವ್ ಸೊಸೈಟಿಯಲ್ಲಿ ಕಟ್ಟಬೇಕಾಗಿದ್ದ ಕಂತನ್ನ ಅವನ ಕೈಲಿ ಕೊಟ್ಟುಕಳುಹಿಸಿದರು ಅಂತ ಹೆಡ್‌ಗುಮಾಸ್ತೆ ಹೇಳಿದರು. ಸರಿ ಐದೂವರೆ ಗಂಟೆ ಹೊತ್ತಿಗೆ ಅವನ ಮನೆ ಮುಂದೆ-ಸುಳಿದಾಡಿದೆ. ಸುಸ್ತಾಯಿತು. ಅವರ ಮನೆ ಮುಂದಿನ ಮರದ ಬೇರಿನಮೇಲೆ ಕುಳಿತೆ. ಪಂಚೆ ಕೊಳೆಯಾದದ್ದು ಪತ್ತೆಯಾದಾಗ ಪಶ್ಚಾತ್ತಾಪಿಸಿ ಮತ್ತೆ ಅತ್ತಿತ್ತ ನಡೆದು ಕಾಲ ತಳ್ಳಿದೆ. ಕಡೆಗೆ ಕಾಣಿಸಿಕೊಂಡ............ಕಟುಕ !

ಸರಿ ವರಾಂಡಾದಲ್ಲಿದ್ದ ಕುರ್ಚಿಯಲ್ಲಿ ನನ್ನನ್ನು ಕೂರಿಸಿ "ತಾಳು" ಅಂತ ಅವನು ಒಳಕ್ಕೆ ನುಗ್ಗಿದ. ಅವನ ಮುಖದ ಮೇಲೆ ಹೊಳೆದ ಒಂದು ರೀತಿಯ ಅನುಮಾನದಿಂದಲೂ, ಭಯದಿಂದಲೂ ನನಗೆ ವಿಷಯ ತಿಳಿದು ಹೋಯಿತು. ಅದೇನೆಂದರೆ,...........ಹತ್ತಿರ ಬನ್ನಿ, ಹೇಳುತ್ತೇನೆ....ನಾರಾಯಣಸ್ವಾಮಿ "ಕೋಳಿ ಕುಕ್ಕ" ಅಂತ. ಅಂದರೆ, ಪರಂಗಿಯವರು ಹೇಳುವ ಹಾಗೆ 'ಕೋಳಿಯಿಂದ ಕುಕ್ಕಿಸಿಕೊಳ್ಳುವ ಹುಂಜ' ಅಂತ. ಪಾಪ-ಹಿಂದಿನ ಹಾಗೆ ಅವನು ಪಾಲ್‌ಮುನಿಯನ್ನು ನೋಡುವುದಕ್ಕೆ ಪರದಾಡದೆ ಬರುವ ಹಾಗಿಲ್ಲ. ಹಣ, ಅಪ್ಪಣೆ-ಎರಡನ್ನೂ ಅಡಿಗೆ ಮನೆಯ ಅಧಿದೇವತೆಯಿಂದಲೇ ಪಡೆದು ಬರಬೇಕು. ಆದ್ದರಿಂದ, ನಾನು ಕುರ್ಚಿಯಲ್ಲಿ ಕುಳಿತಿದ್ದ ಹಾಗೇನೆ, "ಯಾಕೋ! ಖಜಾನೆ ಬೀಗದ ಕೈ ಅಮ್ಮಾವರ ಹತ್ತಿರಲೋ !...........ನಡಿಯಲಿ....ನಡಿಯಲಿ....ಅಂತೂ ನಿನ್ನ ದರ್ಬಾರು ಮುಗಿದು ಹೋಯಿತು!" ಅಂದೆ. ನಾರಾಯಣಸ್ವಾಮೀನೂ ನಾಚಿಕೆ ಮಿಶ್ರವಾದ ನಾಜೋಕಿನಿಂದ "ಇಹಿಹಿಹಿ" ಹಲ್ಲು ಕಿರಿಯುತ್ತಾ ಒಳಕ್ಕೆ ಹೋದ.

ಇಂತಹ ಸನ್ನಿವೇಶವಲ್ಲಿ ನಾನೇನು ಮಾಡುವೆ ಗೊತ್ತೆ ? ನಮ್ಮ ಮನೆ ಗುಟ್ಟನ್ನ ನಾನು ಈರೀತಿ ಬಹಿರಂಗಪಡಿಸುವುದಿಲ್ಲ. ಪುರುಷ ಪ್ರಧಾನವಾದ ಈ ಪ್ರಪಂಚದಲ್ಲಿ ನಾವು ನಮ್ಮ ಸಾಮ್ರಾಜ್ಯವನ್ನು ಸಂರಕ್ಷಿಸುತ್ತಾ ಸ್ತ್ರೀ ಲೋಕವನ್ನು ಸರಿಯಾದ ಹದ್ದುಬಸ್ತಿನಲ್ಲಿಟ್ಟು ಸಂಸಾರ ಸಾಗಿಸಬೇಕೆಂಬುದೇ ನನ್ನ ಸಿದ್ಧಾಂತ. ನಾನು ಗಂಡು-ಗಂಡು ಲೋಕವನ್ನಾಳಿ ಸುವುದೇ ನನ್ನ ಜೀವನ ಧ್ಯೇಯ !

ನನ್ನನ್ನ ನಾರಾಯಣಸ್ವಾಮಿ, "ಬಾರೋ, ಸಿನಿಮಾಗೆ'' ಅಂತ ಆಹ್ವಾನಿಸಿದ್ದಿದ್ದರೆ, ನನ್ನ ವರ್ತನೆಯೇ ಬೇರೆ "ಮೈ ಹುಷಾರಿಲ್ಲವಲ್ಲೋ ! ಆ ಹಾಳು ದೊಂಬಿಯಲ್ಲಿ ಆ ಕೂಗಾಟದಲ್ಲಿ, ತಲೆನೋವು ಬಂದುಬಿಡುತ್ತದೆ, ಕಣೋ ! ಮೊದಲೇ ಒಳ್ಳೆ ಚಿತ್ರ ಅಂತೀಯ ! ಜನ ಕಿಕ್ಕಿರಿದು ಬಿಟ್ಟಿರುತ್ತಾರೆ. ಗಬ್ಬು ವಾಸನೆ ಬೇರೆ. ಮೇಲೆ ಕೂತರೆ ಕೆಳಗಿಂದ ಬೀಡಿ ಹೊಗೆ ಹತ್ತಿಕೊಂಡು ಸುತ್ತಿಕೊಂಡು ಬರುತ್ತದೆ; ಕೆಳಗೆ ಕೂತರೆ ಸಿಳ್ಳು, ಶೀನು ! ಬೇಡಪ್ಪ, ಮಹರಾಯಾ" ಅಂದುಬಿಡುತ್ತೀನೆ. ಅಥವಾ ''ಹೋಗೋ! ಹೋಗೋ! ಎಲ್ಲಾ ಬಿಟ್ಟು ಆ ತರಕಟಾಲು ಮೂತಿಗನ್ನ ನೋಡೋದಕ್ಕೆ ಹೋಗು ! ಆ ಹಾಳು ಚಿತ್ರ ನೋಡಿದರೆ, ಅವನು ಯಾವನೋ ಹಾಸ್ಯ ಮಾಡುತ್ತಾನಲ್ಲಾ ಅದರಲ್ಲಿ, ಅವನ ಹಾರಾಟ ಚೀರಾಟ ನೋಡಿದರೆ ಮೂರು ದಿನದ ತನಕ ಅನ್ನವೇ ಸೇರೋದಿಲ್ಲ'' ಅನ್ನುವುದು. ಬಲವಂತಪಡಿಸಿದರೆ, "ಕಾಸುಕೊಟ್ಟು ಕರೆದುಕೊಂಡು ಹೋಗು ! ಕಾಫಿ ಕುಡಿಸು ! ದಿಂಬಿನ ಬೆಂಚಿನಲ್ಲಿ ಕೂಡಿಸು !....ಮಹರಾಯನ ಹಾಗೆ ಬರುತ್ತೇನೆ....ನೋಡಿಲ್ಲಿ ನಾರಾಯಣಸ್ವಾಮಿ! ನಿನಗೋಸ್ಕರ.... ನಿನಗೋಸ್ಕರ !'' ಅನ್ನುವುದು.

ಮೀರಿ ಹೋಯ್ತು, ಗುಟ್ಟು ರಟ್ಟಾಗುವುದರಲ್ಲಿದೆ. ಅಂದರೆ, ಮತ್ತೊಂದು ಪಟ್ಟನ್ನುಪಯೋಗಿಸಿ ತಪ್ಪಿಸಿಕೊಳ್ಳಬಹುದು. 'ತಾಳೊ, ಒಂದು ನಿಮಿಷ' ನಮ್ಮ 'ಗುಮಾಸ್ತೆ'ಯನ್ನ ವಿಚಾರಿಸುತ್ತೇನೆ "ಅಂತ ಪ್ರಾರಂಭ ಮಾಡೇಬಿಡೋದು. "ಗುಮಾಸ್ತೆ" ಎಂಬ ಮಾತು ಬಹಳ ಮುಖ್ಯವಾದದ್ದು. ಕೆಲವರು, ಖಜಾಂಚಿ, ಕ್ಯಾಷಿಯರ್, ಚಾನ್ಸ್‌ಲರ್ ಆಫ್ ದಿ ಎಕ್ಸ್‌ಚೆಕ್ಕರ್, ಎಂದು ಹೇಳಿ ಹೆಂಡಿರನ್ನು ಅಟ್ಟದ ಮೇಲೆ ಕೂರಿಸಿ ಕೆಳಗಿಳಿಸಲು ಉಪಾಯ ಕಾಣದೆ ಪೇಚಾಡುತ್ತಾರೆ. "ಗುಮಾಸ್ತೆ" ಎಂಬ ಪದವೇ ಸರಿ. ತಕ್ಷಣವೇ ಪುರುಷಾಧಿಕಾರವು ಮತ್ತೆ ನೆಲೆಗೊಳ್ಳುವುದು. ನೋಡೋ ? ಆಫೀಸಿನಲ್ಲಂತೂ ಇದ್ದೇ ಇವೆ; ಲೆಕ್ಕ ಬರೆಯುವುದು. ರಶೀತಿ ಹುಡುಕುವುದು, ಕೂಡುವುದು ಕಳೆಯುವುದು, ಜಮಾ ಖರ್ಚು, ಚಾತಾಬಾಕಿ....ಮನೆಯಲ್ಲೂ ಅದೇಗೋಳು ಯಾಕೆ?....ಅಂತೂ ಸುಮ್ಮನೆ ಗೊರಕೆ ಹೊಡೆಯುತ್ತಾ ಕೂತಿದಾಳಲ್ಲ........ ಅಂತ....ಬರೀ ! ಎಲ್ಲನೂವೆ ಸರಿಯಾಗಿ ....ಲೆಕ್ಕಾಚಾರ ಕಲಿತುಕೊ.....ಅಂತ.... ಬಲವಂತಪಡಿಸಿ ಕಾಸಿನ ಬಾಬ್ತೆಲ್ಲಾ ಸರಿ

ಯಾಗಿ ನೋಡಿಕೊಂಡು ಬರೆದಿಡು ಅಂತ ....ಹೇಳಿದೇನೆ....ನನ್ನ ಗುಮಾಸ್ತೆಗೆ ! ಎಂದು ಒಂದೇ ಸಮನಾಗಿ ಒದರಿಬಿಟ್ಟರೆ ನಮ್ಮ ಮಾನ ಉಳಿಯುತ್ತದೆ. ನಾವು ಹೀಗೆ ಒಂದೇ ಸಮನೆ ಗಟ್ಟಿಯಾಗಿ ಕೂಗಿಬಿಟ್ಟರೆ, ನಿಜವಾಗಿಯೂ ನಮ್ಮ ಮನೆಗೆ ಹುಂಜವೇ ಯಜಮಾನ ಎಂಬುದನ್ನು ಅವರು ಮನಗಾಣದೆ ಇರಲಾರರು.

ನನ್ನ ಉಪದೇಶದಂತೆ ಹೀಗೆ ಅನೇಕರು ಆಗಲೇ ತೊಡಗಿದ್ದಾರೆ. ಮೊನ್ನೆ ನನ್ನ ಹಳೇ ಶಿಷ್ಯನೊಬ್ಬನ ಮನೆಗೆ ಹೋಗಿದ್ದೆ. "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬುದರ ತತ್ವ ಆಗ ನನಗೆ ಮನದಟ್ಟಾಯಿತು. ಆಸಾಮಿ ನನ್ನನ್ನೇ ಮೀರಿಸಿ ಬಿಟ್ಟಿದ್ದಾನೆ. ನಾನು ಹೋಗಿ ಯಥಾಪ್ರಕಾರ ವರಾಂಡಾ ಕುರ್ಚಿಯಲ್ಲಿ ಕುಕ್ಕರಿಸಿದೆ. ಅರ್ಧ ಗಂಟೆ ಬಿಟ್ಟುಕೊಂಡು, ಅವನೇ ಕಾಫಿ ತಂದ. ಅವನ ಕಣ್ಣು ಕೆಂಪಗೆ ಕೆಂಡವಾಗಿತ್ತು. "ಯಾಕೋ" ಅಂದೆ ಮರ್ಯಾದೆಗಾಗಿ, ಆಗ ಅವನು ಆಧುನಿಕ ಸ್ತ್ರೀ ವಿದ್ಯಾಭ್ಯಾಸದ ಮೇಲೆ ಒಂದು ಭಾಷಣಮಾಡಿದ. "ನೋಡಿ, ಸ್ವಾಮಿ! ನಮ್ಮ ರುಚಿಗೆ ತಕ್ಕಂತೆ ನೆಟ್ಟಗೊಂದು ಬಟ್ಟಲು ಕಾಫಿ ಮಾಡುವುದಕ್ಕೆ ಬರುವುದಿಲ್ಲವಲ್ಲಾ ಅಂತೀನಿ ಈಗಿನ ಕಾಲದ ಅಮ್ಮಯ್ಯಗಳಿಗೆ ! ಏನು ಕೆಮಿಸ್ಟ್ರಿಯೋ ? ಏನು ಬಯಾಲಿಜಿಯೋ?.... ಥತ್ ! ಅಡಿಗೆಮನೆಯಿಂದ ಆಚೆ ದಬ್ಬಿಬಿಟ್ಟು—ನಾನೇ ಮಾಡಿಕೊಂಡು ಬಂದೆ. ನೋಡಿ. ಸಾರ್, ಹೇಗಿದೆ ರುಚಿ ?' ಅಂತ ನನ್ನ ಮುಂದಿಟ್ಟ.

ನಾನು ಮನಸ್ಸಿನಲ್ಲೇ 'ಭಲಾ' ಅಂತ ಹೇಳಿದೆ.

ಮಾನ ನಷ್ಟ ಮೊಕದ್ದಮೆಯಲ್ಲಿ ಜಯ ಶೀಲರಾದ ಶ್ರೀ....ರಾಯರು ಹೊಸ ಪ್ರಹಸನ ಒಂದರಲ್ಲಿ ಇನ್ನು ಮುಂದೆ ಪಾತ್ರವಹಿಸುವರಂತೆ.

—ಈ ರೀತಿ ಹೇಳುವುದು ನ್ಯಾಯಾ ಸ್ಥಾನವನ್ನು ಪರಿಹಾಸ್ಯ ಮಾಡಿದಂತಾಗುವುದಿಲ್ಲವೇ.

* * *

ಮಧ್ಯ ಆಫ್ರೀಕಾದ ಯುದ್ಧ ರಂಗದಲ್ಲಿ ಚದುರಂಗ ಪ್ರವೀಣರು ಪ್ರಾಮುಖ್ಯ ಅಧಿಕಾರಿಗಳಂತೆ

—ಈಗ ತಿಳಿಯಿತು ಏಕೆ ಇಷ್ಟು ಸಾವಧಾನವಾಗಿ ಯುದ್ಧ ನಡೆಯುತ್ತೆಂಬುದು.

* * *

ಹೊಸ ಸೀರೆಗಳು ನಮ್ಮ ಹೆಂಗಸರಿಗೆ ಸ್ಫೂರ್ತಿಯನ್ನು ಕೊಡುತ್ತವೆ ಎಂದು ಮಾನಸಿಕ ಶಾಸ್ತ್ರಜ್ಞರ ಅಭಿಪ್ರಾಯ.

—ಹೌದು ನಾವೂ ನೋಡಿದ್ದೇವೆ. ಹೊಸ ಸೀರೆ ಉಟ್ಟಾಗ ಬಂದ ಸ್ಫೂರ್ತಿಯು ತಿರುಗಿಹೋಗಿ ಇನ್ನೊಂದು ಹೊಸ ಸೀರೆ ಕೊಂಡುಕೊಂಡು ಬರುತ್ತಾರೆ.

ನವೀನ ಗಾದೆಗಳು
ಪಾಕಗಾರರದು

ಹೊತ್ತಲ್ಲದ ಹೊತ್ತಲ್ಲಿ, ಹೋಟಲ ಬಾಗಿಲು ತೆರೆದರು-

* * *

ಎಲ್ಲರ ಮನೆ ದೋಸೆ ತೂತಾದರೆ
ಹೋಟಲಿಗೆ ಹೋದವರ ಜೇಬೇ ತೂತು.

* * *

ತೆನೆ ಗೂಡಿದರೆ ಭತ್ತ.
ತಂಗಳು ತಿರುವಿದರೆ ದೋಸೆ.

* * *

ಏನೇ ಬರಲಿ ಒಬ್ಬಟ್ಟಿರಲಿ,
ಯಾರೇ ಬರಲಿ ಸಾರೊಂದಿರಲಿ.
(ಮಾಣಿಗಳ ಸಾಮೂಹಿಕ ಕೂಗು)

* * *

ಮಲ್ಲಿಗೆಗೆ ಸುಣ್ಣ ಹಚ್ಚದಿದ್ದರೂ
ಮಿಠಾಯಿಗೆ ಮಿರುಗು ಹಚ್ಚಲೇಬೇಕು.

* * *

ಸರಿ ಹೋಟಲಿನವನು ರೇಡಿಯೋ ಹಾಕಿಸಿದ ಎಂದು
ನೆರೆ ಹೋಟಲಿನವನು ನೇಣು ಹಾಕಿಕೊಂಡ.

* * *

ರಾಯಗೆ ರಾಜ್ಯ ಹೋದರೆ
ಮಾಣಿಗೆ ಚಟ್ಣಿ ತಿರುವುದು ತಪ್ಪೀತೆ?

* * *

ಕಾಳ ಹೋಟಲಿಗೆ ಬಂದ ಎಂದರೆ
ಮಾಣಿಗೊಂದು ತಿಂಡಿ ತರೋದೆ.

* * *

ಅಂದವಿಲ್ಲ ಚೆಂದಿಲ್ಲ
ಹೆಸರು ಕೇಳಿದರೆ ಚಿತ್ರಾನ್ನ.

* * *

ಎಲೆ ಹೊತ್ತಿಗೆ ಎರಡು ಪಲ್ಯ ಎಳೆದರೆ ಸಾಕು.

ಧೋಂಡೂ

ಹಿಂದಿನ ಮಾತು; ಹಾಸ್ಟಲ್‌ದು. ಆ ವರ್ಷ ನನ್ನ ನಾಲ್ಕನೆಯ ಇಂಟರ್ ಯಾತ್ರೆ! "ಮನೇಲೇ ಓದು-ಹಾಸ್ಟಲಿಗೆ ಬೇರೆ ದುಡ್ಡು ದಂಡ" ಅಂದ್ರು ನಮ್ಮಪ್ಪ "ಮನೇಲಿದ್ರೆ ಓದೋಕಾಗೋಲ್ಲಾ ಅಣ್ಣಾ! ಹೂಗು ಸದಾ ಅಡಿಗೆ ಮನೆ ನೇರಕ್ಕೆ ಇರುತ್ತೆ! ಅಲ್ಲಿ ಅಂದ್ರೆ ಬಾಕಿ ಹುಡುಗರೂ ಓದ್ತಾ ಇರ್ತಾರೆ. ಅವರನ್ನು ನೋಡಿದರೆ ನನಗೂ ಒಂದು ತರಹ ಹುಮ್ಮಸ್ಸು ಬರುತ್ತೆ.....ಈ ಸಲ ಒಂದು ಕೈ ನೋಡೇ ಬಿಡ್ತೇನೆ'' ಅಂತ ಧೈರ್ಯ ಕೊಟ್ಟು ಹಾಸ್ಟಲಿಗೆ ಬಂದೆ.

ಆ ವರ್ಷ ಧೋಂಡು ಹಾಸ್ಟಲಿಗೆ ಹೊಸಬ. ''ರಾಮಸ್ವಾಮಿ'' ಅಂತ-ಅವನ ಮಾತಾಪಿತೃಗಳು ಇಟ್ಟ ನಾಮಧೇಯ. ನೂರರವತ್ತು ಪೌಂಡು ದೇಹ ಹುಲುಸಾಗಿ, ದುಂಡಾಗಿ ಬೆಳೆದು ನಿಂತಿತ್ತು. ಕೃಷ್ಣವರ್ಣ-ಅದರಲ್ಲೂ ಗ್ಯಾರಂಟೀ ಮಾಲು-ಕೊಡಗಿನ ಕಾಫಿ ತೋಟದಲ್ಲಿ ಬೆಳೆದದ್ದು ಆ ದೇಹ. ಮುಖದಲ್ಲಿ ಅದೊಂದು ಬಗೆಯ ಮೀಸೆ. ವಿಚಿತ್ರ ರೀತಿಯಲ್ಲಿ ಮುಂಬಾಗಿದ ಗಲ್ಲ; ಅದರಿಂದ! ಹೊರ ಹೊರಟ ಕರಿಯ ಗಡ್ಡ, ಅವನ ಮುಖಕ್ಕೆ ಮೆರಗು ಕೊಟ್ಟಿತ್ತು. ನಾವೂ ಅವನನ್ನು ಚೋಳಿಸಲು ಅದೇನೇನೋ ಪ್ರಯತ್ನ ಮಾಡಿದೆವು. ಮುಖದ ಮುಂದೆ ಕನ್ನಡಿ ಹಿಡಿದೆವು. ಉಹುಂ. ''ಎಲ್ಲೋ! ಗಡ್ಡೇ ಬೆಳೆದಿಲ್ಲ!" ಅಂದೇಬಿಟ್ಟ.

ಧೋಂಡು ಅವರ ಮುತ್ತಾತನ ಏಕಮಾತ್ರ ಪೌತ್ರ. ಒಬ್ಬನೇ "ಮೊಮ್ಮಗ'' ಎಂದು ಅವನನ್ನು ಮೊದ್ದಾಗಿ ಬೆಳೆಸಿದ್ದರು. ಆ ದೇಹಕ್ಕೆ ಒಳ್ಳೆಯ ಸೂಟುಗಳನ್ನು ತೊಡಿಸಿ, ಬೀದಿಯಲ್ಲೆಲ್ಲಾ ಮೆರವಣಿಗೆ ಮಾಡಿದರು. ಆದರೆ ಪಾಪ ಲೋವರ್ ಸೆಕೆಂಡರೀಲೇ ಎಡವಿ ಬಿದ್ದ. ಕುಂಟೇ ಕುಂಟೇ ಇಂಟರ್‌ಮೀಡಿಯೇಟಿಗೆ ಬಂದು ಸುಸ್ತಾಗಿ ಕೂತೇಬಿಟ್ಟ.

ಧೋಂಡುವಿಗೆ ತಿಂಡಿಯೇ ಪ್ರಾಣ; ಮನೆಯಲ್ಲಿ ಅತ್ತಾಗಲೆಲ್ಲಾ ಅವನ ಅಜ್ಜಿ, ಕೈಗೆ ಕೋಡುಬಳೆಯೋ ಚಕ್ಕುಲಿಯೋ ಕೊಟ್ಟು ಬಾಯಿ ಮುಚ್ಚಿಸುತ್ತಿದ್ದರಂತೆ. ಬೆಳೆದ ಮೇಲೆ ಆಳು ನಿಂತರೂ ತಿಂಡಿಯ ಚಾಪಲ್ಯ ಮಾತ್ರ ಹಾಗೆಯೇ ಉಳಿಯಿತು; ಬೆಳೆಯಿತು. ಬೆಂಗಳೂರಿಗೆ ಬಂದ ಮೇಲೆ ನೆನೆದಾಗಲೆಲ್ಲಾ ಅಜ್ಜಿಯವರ ತಿಂಡಿ ಸಿಕ್ಕುತ್ತಿರಲಿಲ್ಲ. ಹಸಿದಾಗಲೆಲ್ಲಾ ತುಪ್ಪ ಮಸಾಲೆ ಹೊಟ್ಟೆಗೆ ಬೀಳುತ್ತಿತ್ತು. ಆದರೂ, ಅದನ್ನು ತಿನ್ನುವಾಗಲೆಲ್ಲಾ ಕೊರಗು. ಅಜ್ಜಿ ತಿಂಡಿಯೇ ಎಷ್ಟಾದರೂ ರುಚಿ-ಹೆಂಗಸರ ಕೈವಾಡ ಅಂದರೇ ಹಾಗೆ!

ಇತರ ಹುಡುಗರು ತಿಂಗಳಿಗೊಮ್ಮೆ ನೋಟೀಸ್ ಕೊಡ್ತಾರೆ ತೀರ್ಥರೂಪುಗಳಿಗೆ-ಆದರೆ ಧೋಂಡು ''ಒಂದು ಬಟ್ಟೆ.... ಅಂತ ಬರೆಯುತ್ತಾನೆ. ಮಗನ ನಾಲ

ಗೆಯ ಗುಟ್ಟು ಗೊತ್ತಿದ್ದ ಅವನ ತಾಯಿಯವರೂ ಬುಟ್ಟಿಯಲ್ಲಿ ತಿಂಡಿ ತುಂಬಿ ಕಳುಹಿಸುತ್ತಿದ್ದರು. ಅದು ಕೊಡಗಿನಿಂದ ಮೈಸೂರಿನವರೆಗೂ ಬಸ್ಸಿನಲ್ಲಿ ಬಂದು, ಅಲ್ಲಿಂದ ರೈಲಿನಲ್ಲಿ ಬೆಂಗಳೂರು ತಲುಪುತ್ತಿತ್ತು. ಸ್ಟೇಷನ್ನಿನಿಂದ ಹಾಸ್ಟಲಿಗೆ ಸಾಗಿಸುವುದು ಘೋಂಡುವಿಗೆ ಶ್ರಮದ ಕಾರ್ಯವಾಗಿತ್ತು. ಗುಟ್ಟು ಗೊತ್ತಾದರೆ, ಹಾಸ್ಯ ಹಾಗಿರಲಿ.-ತಿಂಡಿಗೂ ಬಾಯೊಡ್ಡುತ್ತಾರಲ್ಲಾ ಎಂಬುದೇ ಅವನ ವ್ಯಥೆ. ರಾತ್ರಿ ಯಾರಿಗೂ ಗೊತ್ತಾಗದ ಹಾಗೆ, ಹಳೇ ಜಮುಖಾನೆ ಒಂದರಲ್ಲಿ ಸುತ್ತಿ ತರುತ್ತಿದ್ದ. ಅವನ ರೂಂ ಮೇಟ್ ಮಲಗಿ ನಿದ್ರಿಸುತ್ತಿರುವ ಸಮಯದಲ್ಲಿ ಕಾದಿದ್ದು, ಅವನ ಪೆಟ್ಟಿಗೆಯಲ್ಲ ಸೇರಿಸುತ್ತಿದ್ದ!

ಘೋಂಡು ತಿಂಡಿ ತರುವ ಬಗೆ, ತಿನ್ನುವ ಸುಸಮಯ ಇವು ಯಾವುವೂ ಯಾರಿಗೂ ಗೊತ್ತೇ ಇರಲಿಲ್ಲ! ಅವನ ರೂಂ ಮೇಟ್ ರಾಜನಿಗೂ ಗೊತ್ತಿರಲಿಲ್ಲ ಅಂದ ಮೇಲೆ ಇನ್ನು ಬಾಕಿಯವರಿಗೆ ಹೇಗೆ ಗೊತ್ತಾದೀತು? ವಿಷಯ ಪತ್ತೆ ಆದದ್ದು ಹೀಗೆ. ಅದು ಯಾವುದೋ ಒಂದು ಅಮಾವಾಸ್ಯೆ. ಕಾಳರಾತ್ರಿ. ರಾಜ ಯಾವುದೋ ಪುಸ್ತಕ ಓದುತ್ತಾ ನಿದ್ರೆ ಮಾಡುತ್ತಿದ್ದ....ಇದ್ದಕ್ಕಿದ್ದ ಹಾಗೆಯೇ ಎಚ್ಚರವಾಯಿತು....ಏನೋ ಶಬ್ದ! ಕಿವಿಗೊಟ್ಟು ಕೇಳಿದ. ಆ ಕಾಳರಾತ್ರಿಯ ಪ್ರಶಾಂತತೆಯನ್ನು ಸೀಳಿಕೊಂಡು ಬಲು ದೂರದಲ್ಲಿ ಯಾವುದೋ ನಾದ ಕೇಳಿಬರುತ್ತಿತ್ತು. ಬರ ಬರುತ್ತಾ ಕೊಠಡಿಯಲ್ಲಿಯೇ ಅದು ಕೇಳಿಬಂದಂತೆ ತೋರಿತು. ಇಲಿಗಳ ಹಾವಳಿಯೇ? ಛಿ! ಪಕ್ಕಕ್ಕೆ ತಿರುಗಿ ನೋಡಿದ. "ಅಯ್ಯೋ!" ಬೆಚ್ಚಿ ಕೂಗಿಕೊಂಡ. ಯಾವುದೋ ಕಪ್ಪಗೆ ಒಂದು ದೆವ್ವ ಕೂತಿತ್ತು. "ಘೋಂಡೂ! ಘೋಂಡೂ.... ದೆವ್ವಾ!" ಎಂದು ಅರಚಿದ. "ಏನು ರಾಜಾ?"-ಆ ಕರಿಯ ದೇಹವೇ ಗಾಬರಿಯಿಂದ ಮಾತನಾಡಿತು. ದೀಪವನ್ನು ಹಾಕಿದಾಗ ಪತ್ತೆಯಾಯಿತು. "ಘೋಂಡೂ! ನಿಜವಾಗಿಯೂ ಎಲ್ಲೊ ದೆವ್ವಾ ಅಂತ ಇದ್ದೆ!" ಘೋಂಡು ಕೈಯಲ್ಲಿ ಕೋಡುಬಳೆ, ಬಾಯಲ್ಲಿ ಚಕ್ಕುಲಿ. ಪೆಟ್ಟಿಗೆಯ ಒಳಗಡೆ ಡಬ್ಬದ ತುಂಬ ಚಕ್ಲಿ, ಮುಚ್ಚೋರೆ! ರಾಜ ದೀಪ ಆರಿಸಿದ. ಕ್ಷಣ ಮಾತ್ರ ಆ ಕರಿಯ ಮುಖದಿಂದ ಒಂದು ಜ್ಯೋತಿ ಇಣಿಕಿ ನೋಡಿ, ಮಾಯವಾಯಿತು. ರಾಜ ಕಣ್ಣು ಮುಚ್ಚಿದ.

ಆಳಿಯನ ಕುರುಡು ರಾತ್ರಿಯೇ ಗೊತ್ತಾಗಿಹೋಯಿತು. ಮಾರನೆಯ ದಿನ ಎಲ್ಲರ ಬಾಯಲ್ಲೂ ಘೋಂಡು, ಕೋಡುಬಳೆ. ನಮಗೂ ಒಂದು ಕಡೆ ಆಶ್ಚರ್ಯ; ಇನ್ನೊಂದು ಕಡೆ ಕೋಪ. ನಮಗೇ ಚೊಳ್ಳೆ ಹಣ್ಣು ತಿನ್ನಿಸಿದ ಘೋಂಡುವಿಗೆ ತಕ್ಕ ಶಾಸ್ತಿ ಮಾಡಿಸಬೇಕೆಂದು ತೀರ್ಮಾನಿಸಿದೆವು.

ಮೂರು ತಿಂಗಳು ಉರುಳಿ ಹೋಯಿತು. ಒಂದು ದಿವಸ ಘೋಂಡು ತಂದೆ, ಹಾಸ್ಟಲಿಗೆ ಬಂದ್ರು. ಕೈಯಲ್ಲಿ ಒಂದು ಬ್ಯಾಗು. ಸುಮಾರು ದೊಡ್ಡದಾಗಿಯೇ ಇತ್ತು. ನನಗೆ ಯಾಕೋ ಅನುಮಾನವಾಯಿತು. ರಾಜನಿಗೆ ಹೇಳಿದೆ. ಅವನು ಅವತ್ತೆಲ್ಲಾ ರೂಂ ಬಿಟ್ಟು ಅಲ್ಲಾಡಲೇ ಇಲ್ಲ. ಘೋಂಡು ಏನೇನೋ ಮಾಡಿದ. ಹೊರಡುವ ಮುನ್ನ "ಇಕೋ" ಅಂತ ಹೇಳಿ, ಅವನ ತಂದೆಯವರು ಬಿಜಯಂಗೈದರು ರಾಜನ ಮೂಗು ಸುಟಿಯಾಗಿತ್ತು. ಗುಟ್ಟು ಗೊತ್ತಾಯಿತು.

ಸರಿ! ಪಿತೂರಿಗೆ ಪ್ರಾರಂಭ! ನನ್ನ ರೂಂನಲ್ಲೇ ಒಂದು ಸೀಕ್ರೆಟ್ ಪೆರ್ಷ ಸೇರಿ ವಿವಿಧ ವಿಧಾನಗಳನ್ನು ಚರ್ಚಿಸಿದೆವು. "ಲೋ" ಅಂದ ಗೋಪಿ. ಗೋಪಿಗೆ ಆಗಾಗ ಸ್ಫೂರ್ತಿ ಬರುವುದುಂಟು. "ಏನಪ್ಪಾ ಅಂದೆ" "ಅವನನ್ನು ರಾತ್ರಿ ಸಿನಿಮಾ ಸೆಕೆಂಡ್ ಷೋಗೆ ನಾನು ಕರ್ಕೊಂಡು ಹೋಗ್ತೀನೆ. ಮಿಕ್ಕ ಕೆಲಸ ನೀವು ಮಾಡ್ಬೇಕು....." ಸರ್ವರೂ

ಹೊಂಗುಟ್ಟಿದೆವು. "ನನ್ನ ಕಂಡರೆ ಅವನಿಗಿನ್ನೂ ಗೌರವ ಹೋಗಿಲ್ಲ. ಆಂ! ಗೊತ್ತಾಯಿತೆ" ಅಂದ. ಗೊತ್ತಾಯಿತು ಅಂದೆ. ಸರಿ! ಬೀಗ ಹೇಗೆ ತೆಗೆಯೋದು? "ಮಹಾ! ಅದೊಂದು ಕಷ್ಟ ಅಲ್ವೇ, ಹಾಸ್ಟಲಲ್ಲಿ ಇಷ್ಟು ಬೀಗದ ಕೈಗಳಿವೆ. ಯಾವುದಾದರೂ ಒಂದು ಸರಿಹೋಗುತ್ತೆ" ಅಂದ ರಾಜ.

ರಾತ್ರಿಯಾಯಿತು. ಗೋಪಿ ಅವತ್ತೆಲ್ಲಾ ಧೋಂಡುವಿನ ಹಿಂದೆ ಬಾಲ. ಅವನ ಮುಂದೆ ಯಾರೂ ಗೋಳ್ಗೀತವನ್ನು ಅವತ್ತು ಹಾಡಲಿಲ್ಲ. ಗೋಪಿ, ಅವನ ಸುತ್ತಾ ಸುಳಿದಾಡಿ, ಸಿನಿಮಾ ತಾರೆಗಳನ್ನು ಬಣ್ಣಿಸಿ, ತಾನೇ ಹಾಡಿ "ಇದಕ್ಕಿಂತ ನೂರು ಪಾಲು ಏಕೆ ಸಹಸ್ರ ಪಾಲು" ಅಂತ ಕಂಠಪೂರ್ತ ಹೊಗಳಿ, ರಾತ್ರಿ ಸೆಕೆಂಡ್ ಷೋಗೆ ಅವನು ಬರಲು ಒಪ್ಪಿಸಿದ. "ಹ ಹ್ಹ ಹ್ಹಾ" ಎಂದು ಒಂದು ವಿಜಯ ಗೀತೆಯನ್ನು ಹಾಡುತ್ತಾ ಧೋಂಡುವನ್ನು ಸಿನಿಮಾ ಮಂದಿರಕ್ಕೆ ಹಿಂಬಾಲಿಸಿದ.

ಅವರು ಕಣ್ಮರೆಯಾದ ಕೂಡಲೇ ಎಲ್ಲರೂ ಧೋಂಡುವಿನ ರೂಮಿನಲ್ಲಿ ಸೇರಿದೆವು. ಇದ್ದ ಬೀಗದ ಕೈಗಳನ್ನೆಲ್ಲಾ ಪ್ರಯತ್ನ ಮಾಡಿ ನೋಡಿದೆವು. ಯಾಕೋ ಪರಿಸ್ಥಿತಿ ನಿರಾಶಾಜನಕವಾಗಿ ....ಇದ್ದಕ್ಕಿದ್ದ ಹಾಗೆ ಪೆಟ್ಟಿಗೆ ಬಾಗಿಲು ತೆರೆಯಿತು. ಒಳಗೆ ನೋಡಿದರೆ, ಒಂದು ದೊಡ್ಡ ಡಬ್ಬಾ. ಅದರ ಸುತ್ತಾ ತಿಂಡಿ ಚೂರುಗಳು; ಗತವೈಭವದ ಅವಶೇಷಗಳು....ಕೋಡುಬಳೆ, ಮುಚ್ಚೋರೆ ಅವಲಕ್ಕಿ— ಶಜ್ಜಪ್ಪ........ಎಲ್ಲಾ....ಡಬ್ಬದ ಮುಚ್ಚಳ ತೆಗೆದ. ತುಂಬಾ ಚಕ್ಲಿ— ಘಂ ಗು ಟ್ಟು ತ್ತಿ ತ್ತು ವಾಸನೆ! ಚರ್ಚೆಗೆ ಅವಕಾಶವೇ ಇಲ್ಲ. ಕೈಗೂ ಬಾಯಿಗೂ ಪೈಪೋಟಿ ಪ್ರಾರಂಭವಾಯಿತು. ಅಷ್ಟನ್ನೂ ಮುಗಿಸೇಬಿಟ್ಟೆವು. "ಲೋ! ಗೋಪೀಗೆ ಬೇಡ್ವೇನೋ?" ಅಂದ ರಾಜ ಎಲ್ಲಾ ಮುಗಿದ ಮೇಲೆ. ಹೌದು! ಅವನನ್ನು ಮರೆತೇಬಿಟ್ಟಿದ್ದೆವು. ಯಾಕ್ರಪ್ಪಾ, ಯೋಚನೆ? ಹೋಟಲಿಗೆ ಹೋಗಿ ಒಂದಿಷ್ಟು ಚೌ ಚೌ ತಂದರಾಯಿತು ಅಂದ ಶೀನು "ಅವನಿಗಷ್ಟು ಗೊತ್ತಾಗೊಲ್ವೇ? ಹೋಟಲದು ಅಂತ.-ಬೆಂಗಳೂರು ಒಂದು ಹೋಟಲು ಬಿಡ್ದೆ ತಿರುಗಿದಾನೆ ಅವನು." ಎಂದು ಸುಬ್ಬಣ್ಣ ಕೊಕ್ಕೆ ಹಾಕಿದ. "ವಡೆ ಚಕ್ಲಿ ಮಾರುವವರ ಹತ್ರ ಕೊಂಡ್ಕೊಂಡು ಬರೋಣ...." ಅಂದೆ. ಸುಬ್ಬು-ಕೂಡಲೇ ಹೋದ.

ಡಬ್ಬವನ್ನು ಮುಚ್ಚಿ ಯಥಾಸ್ಥಾನದಲ್ಲಿಟ್ಟು ಪೆಟ್ಟಿಗೆ ಬೀಗ ಹಾಕಿದೆವು.-ಒಳ್ಳೆಯಹುಡುಗರ ಹಾಗೆ ವಾಪಸ್ "ಹಟ್ ಗಯುಲೋ ಖಾಲಿ ಡಬ್ಬಾ" ಎಂದು ಖುಷಿಯಾಗಿ ಹಾಡು ಬಿಟ್ಟೆ. ಧೋಂಡು ಗೋಪಿ-ಇಬ್ಬರೂ ಹಿಂತಿರುಗಿದ್ದು. ಗೋಪಿಯ ಹಾಡಿನಿಂದ ಗೊತ್ತಾಯಿತು. ದೀಪಗಳನ್ನಾರಿಸಿ ಮಲಗಿದಂತೆ ನಟಿಸಿದೆವು.

ಅರ್ಧ ಗಂಟೆಯಾಯಿತು. ಧೋಂಡು ಪಕ್ಕದ ರೂಮೇ ನಂದು. ಗೋಡೆಯೀಚೆ ನಾನು; ಆಚೆ ರಾಜ. ಗೋಡೆಯನ್ನು ಕುಟ್ಟಿದ ರಾಜ ಮೆತ್ತಗೆ....

"ಏನೋ ಧೋಂಡೂ? ಹೇಗಿದೆ ಚಕ್ಲೀ? ಬಹಳ ರುಚಿಯಾಗಿದೆಯೋ?' ಎಂದೆ ನಾನು. ಹತ್ತಾರು ಮುಖಗಳು ಒಮ್ಮೆಲೇ ನಕ್ಕವು. ರಾಜ ಲೈಟ್ ಹಾಕಿದ—ಕೈಯಲ್ಲಿ ಖಾಲಿ ಡಬ್ಬ. ದಿಗ್ಭ್ರಮೆ ಹಿಡಿದು ಪೆಟ್ಟಿಗೆಯ ಮುಂದೆ ಕೂತಿದ್ದ ಧೋಂಡು ಅವನ ಮುಖವೂ ಕೆಂಪೇರಿತ್ತು.

—ಮೂರ್ತಿ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

ಬೆಂಗಾಲ್.. ....ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು ಖ್ಯಾತಿಪಡೆದಿದೆ

